


# ಮಾನ್ಯ ರಾಷ್ಟ್ರಪತಿಯವರ ಶ್ಲಾಘನೀಯ ಸೇವಾ ಪದಕ

ಸ್ವಾತಂತ್ರೋತ್ಸವ ದಿನಾಚರಣೆ - 2019






**ಶ್ರೀ ಎಸ್.ಆರ್. ಮಹಾಂತರೆಡ್ಡಿ**

ಎಸಿಪಿ ಚಿಕ್ಕಪೇಟೆ ಉಪ-ವಿಭಾಗ
ಬೆಂಗಳೂರು ನಗರ (ನಿವೃತ್ತ)

ಇವರು ಪಿಎಸ್ಐ ಆಗಿ 1990 ರಲ್ಲಿ ಸೇವೆಗೆ ಸೇರಿರುತ್ತಾರೆ. ಬಳ್ಳಾರಿ ಜಿಲ್ಲೆಯ ವಿವಿಧ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು, ಸದರಿ ಅವಧಿಯಲ್ಲಿ ಗಂಧದ ಕಳ್ಳರನ್ನು, ಕುಖ್ಯಾತ ರೌಡಿಗಳನ್ನು ನಕ್ಸಲರನ್ನು ಸೆರೆಹಿಡಿದಿದ್ದು, ಮಟ್ಕಾ ಗ್ಯಾಂಬ್ಲಿಂಗ್ ಗುಂಪಿನವರಿಂದ ರೂ.7 ಲಕ್ಷ ಹಣ ವಶಪಡಿಸಿಕೊಂಡಿರುತ್ತಾರೆ. ಕಾನೂನು ಮತ್ತು ಸುವ್ಯವಸ್ಥೆಯನ್ನು ನಿಯಂತ್ರಿಸುವಲ್ಲಿ ನಿರ್ವಹಿಸಿರುವ ಜವಾಬ್ದಾರಿಯು ಪ್ರಶಂಸನೀಯ. ಕೋಟೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಅಪರಾಧಿಗಳಿಂದ ರೂ.53 ಲಕ್ಷದ ಯಂತ್ರೋಪಕರಣಗಳನ್ನು ವಶಪಡಿಸಿಕೊಂಡಿರುತ್ತಾರೆ ಹಾಗೂ ಕುಖ್ಯಾತ ಕಳ್ಳಸಾಗಾಣಿದಾರರಿಂದ ರೂ.1 ಕೋಟಿ 50 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ. ವಿಧಾನಸಭಾ ಮತ್ತು ಲೋಕಸಭಾ ಚುನಾವಣಾ ಬಂದೋಬಸ್ತನ್ನು ಅತ್ಯುತ್ತಮವಾಗಿ ನಿರ್ವಹಿಸಿರುತ್ತಾರೆ. ಐಎಂವಿ ಪ್ರಕರಣದಲ್ಲಿ ರೂ.17 ಲಕ್ಷ ದಂಡವನ್ನು ವಸೂಲು ಮಾಡಿರುತ್ತಾರೆ. ಎಕ್ಸೈಜ್ & ಲಾಟರಿ ವಿಭಾಗದಲ್ಲಿದ್ದಾಗ ರೂ.12 ಲಕ್ಷ ಮೌಲ್ಯದ ಆಕ್ರಮ ವಿಕ್ರಿಯನ್ನು ವಶಪಡಿಸಿಕೊಂಡಿರುತ್ತಾರೆ. ಅಲ್ಲದೇ ಅನೇಕ ಅನೈತಿಕ ಚಟುವಟಿಕೆಗಳ ಸ್ಥಳಗಳ ಮೇಲೆ ದಾಳಿ ನಡೆಸಿರುತ್ತಾರೆ. ಲೋಕಾಯುಕ್ತ ವಿಭಾಗದಲ್ಲಿದ್ದಾಗ ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ದಾಳಿಗಳನ್ನು ಮಾಡಿರುತ್ತಾರೆ. ವಿ.ವಿ.ಪುರಂ ಪೊಲೀಸ್ ಠಾಣೆಯ ಪ್ರಕರಣದಲ್ಲಿ ರೂ. 55 ಲಕ್ಷ ಮೌಲ್ಯದ ವಸ್ತುಗಳು, 1.7 ಕೆ.ಜಿ ಚಿನ್ನವನ್ನು ವಶಪಡಿಸಿಕೊಂಡಿರುತ್ತಾರೆ. ಅನೇಕ ಘೋರ ಪ್ರಕರಣಗಳನ್ನು ಸೂಕ್ತ ಮೇಲ್ವಿಚಾರಣೆ ವಹಿಸಿ ಇತ್ಯರ್ಥಪಡಿಸಿರುತ್ತಾರೆ. ಮಾನವ ಕಳ್ಳಸಾಗಾಣಿಕೆ ಪ್ರಕರಣದಲ್ಲಿ 23 ಮಹಿಳೆಯರನ್ನು ರಕ್ಷಣೆ ಮಾಡಿದ್ದು, ಹಿರಿಯ ಅಧಿಕಾರಿಗಳ ಪ್ರಶಂಸನೆಗೆ ಪಾತ್ರರಾಗಿರುತ್ತಾರೆ. ಚಿಕ್ಕಪೇಟೆ ಉಪ-ವಿಭಾಗದಲ್ಲಿ ಅನೇಕ ಕಳುವು ಪ್ರಕರಣಗಳ ಮೇಲ್ವಿಚಾರಣೆ ವಹಿಸಿ, ರೂ. 2 ಕೋಟಿ ಗಿಂತಲೂ ಹೆಚ್ಚಿನ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ. ಇವರು ಪ್ರಾಮಾಣಿಕ, ದಕ್ಷ, ಶಿಸ್ತುಬದ್ಧ ಅಧಿಕಾರಿಯಾಗಿದ್ದು, ಗುಣಮಟ್ಟದ ನಾಯಕತ್ವವನ್ನು ವಹಿಸಿ ಇತರರಿಗೆ ಮಾದರಿಯಾಗಿ ಸೇವೆ ಸಲ್ಲಿಸಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಟಿ ಮಂಜುನಾಥ**
ಡಿವೈಎಸ್‌ಪಿ,
ಸಿಐಡಿ

ಇವರು 1999 ರಲ್ಲಿ ಪಿಎಸ್‌ಐ ಆಗಿ ಸೇವೆಗೆ ಸೇರಿದ್ದು, ಸೇವೆಗೆ ಸೇರಿದಾಗಿನಿಂದಲೂ ನಿಷ್ಠೆ, ಧೈರ್ಯ ಮತ್ತು ಅಸಾಧಾರಣ ತನಿಖಾ ಕೌಶಲ್ಯವನ್ನು ಪ್ರದರ್ಶಿಸಿರುತ್ತಾರೆ. ರಾಯಚೂರು ಜಿಲ್ಲೆಯಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಲು ಮತ್ತು ರೌಡಿ ಚಟುವಟಿಕೆಗಳನ್ನು ನಿಗ್ರಹಿಸಲು ಕೈಗೊಂಡಿರುವ ಕ್ರಮಗಳು ಪ್ರಶಂಸನೀಯ. ಹೊಸಪೇಟೆ ಟೌನ್ ಪೊಲೀಸ್ ಠಾಣೆಯಲ್ಲಿದ್ದಾಗ ಅಪಹರಣ ಪ್ರಕರಣದಲ್ಲಿ ನಕ್ಸಲರನ್ನು ಸೆರೆಹಿಡಿದು, ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡಿರುತ್ತಾರೆ. ಸಾಗರ ಟೌನ್‌ನಲ್ಲಿ 2005 ರಲ್ಲಿ ಗಣೇಶ ಹಬ್ಬದ ಸಂದರ್ಭದಲ್ಲಿ ಉಂಟಾಗಿದ್ದ ಕೋಮು ಘರ್ಷಣೆಯನ್ನು ಯಶಸ್ವಿಯಾಗಿ ನಿಯಂತ್ರಿಸಿರುತ್ತಾರೆ. ಕುಖ್ಯಾತ ಅಪರಾಧಿಗಳನ್ನು ಸೆರೆಹಿಡಿದಿದ್ದು, ಹಿರಿಯ ಅಧಿಕಾರಿಗಳ ಮತ್ತು ಸಾರ್ವಜನಿಕರ ಪ್ರಶಂಸನೆಗೆ ಪಾತ್ರರಾಗಿರುತ್ತಾರೆ. ಬಳ್ಳಾರಿಯಲ್ಲಿ ಸಂಚಾರ ದಟ್ಟಣೆಯನ್ನು ಸೂಕ್ತ ರೀತಿಯಲ್ಲಿ ನಿಭಾಯಿಸಿ, ಕಠಿಣ ಕ್ರಮಗಳನ್ನು ಕೈಗೊಂಡು ಸಂಚಾರ ನಿಯಮ ಪಾಲನೆಯಲ್ಲಿ ಶಿಸ್ತನ್ನು ತಂದಿರುತ್ತಾರೆ. ಇವರು ತನಿಖೆ ಕೈಗೊಂಡು ಹಲವು ಪ್ರಮುಖ ಘೋರ ಪ್ರಕರಣಗಳಲ್ಲಿ ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಿರುತ್ತದೆ. ಬೆಂಗಳೂರಿನ ರಾಜರಾಜೇಶ್ವರಿ ನಗರದಲ್ಲಿ ದುಷ್ಕರ್ಮಿಗಳು ಡಾ|| ರಾಜ್‌ಕುಮಾರ್ ರವರ ವಿಗ್ರಹವನ್ನು ಧ್ವಂಸಗೊಳಿಸಿದ್ದರಿಂದ ಉಂಟಾಗಿದ್ದ ಉದ್ವಿಗ್ನ ಪರಿಸ್ಥಿತಿಯನ್ನು ನಿಯಂತ್ರಿಸಿ, ಅಪರಾಧಿಗಳನ್ನು ಸೆರೆಹಿಡಿದಿರುತ್ತಾರೆ. ಕಬ್ಬನ್‌ಪಾರ್ಕ್ ಉಪ-ವಿಭಾಗದಲ್ಲಿದ್ದಾಗ ದ್ವಿಚಕ್ರ ವಾಹನ ಕಳ್ಳರನ್ನು ಸೆರೆಹಿಡಿದು ರೂ.21 ಲಕ್ಷ ಮೌಲ್ಯದ ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಂಡಿರುತ್ತಾರೆ. ಅಲ್ಲದೇ 1 ಕೋಟಿ 19 ಲಕ್ಷ ಮೌಲ್ಯದ ವಜ್ರ ಮತ್ತು ಚಿನ್ನದ ಆಭರಣಗಳನ್ನು ವಶಪಡಿಸಿಕೊಂಡಿರುತ್ತಾರೆ. ಅಶೋಕನಗರ ಮತ್ತು ವಿವೇಕನಗದಲ್ಲಿ ಒಟ್ಟು ರೂ. 7 ಕೋಟಿ 96 ಲಕ್ಷ ಖೋಟಾ ನೋಟುಗಳನ್ನು ಅಪರಾಧಿಗಳಿಂದ ವಶಪಡಿಸಿಕೊಂಡಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಕೆ ರವಿಶಂಕರ್**

ಡಿವೈಎಸ್‌ಪಿ,
ಚಿಕ್ಕಬಳ್ಳಾಪುರ ಉಪ-ವಿಭಾಗ,
ಚಿಕ್ಕಬಳ್ಳಾಪುರ ಜಿಲ್ಲೆ

ಇವರು 1994 ರಲ್ಲಿ ಪಿಎಸ್‌ಐ ಆಗಿ ಸೇವೆಗೆ ಸೇರಿರುತ್ತಾರೆ. ಬುನಾದಿ ತರಬೇತಿಯನ್ನು ಮುಗಿಸಿದ ನಂತರ ಕೊಡಗು ಜಿಲ್ಲೆ, ರಾಮನಗರ ಜಿಲ್ಲೆ, ರಾಜ್ಯಗುಪ್ತವಾರ್ತೆ, ಬೆಂಗಳೂರು ನಗರ ಮತ್ತು ಕರ್ನಾಟಕ ಲೋಕಾಯುಕ್ತದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಪಿಎಸ್‌ಐ, ಪಿಐ ಆಗಿದ್ದ ಸಂದರ್ಭಗಳಲ್ಲಿ ಠಾಣಾವ್ಯಾಪ್ತಿಯಲ್ಲಿ ಅಪರಾಧ/ಅನೈತಿಕ ಚಟುವಟಿಕೆಗಳು ನಡೆಯದಂತೆ ತಡೆಗಟ್ಟಲು ಎಲ್ಲಾ ರೀತಿಯ ಮುಂಜಾಗ್ರತ ಕ್ರಮಗಳನ್ನು ಕೈಗೊಂಡಿರುತ್ತಾರೆ. ಬಿಡದಿಯಲ್ಲಿನ ರಿಸಾರ್ಟ್‌ನಲ್ಲಿ ಅನೈತಿಕ ಚಟುವಟಿಕೆಳು ನಡೆಯುತ್ತಿದ್ದರಿಂದ, ಸದರಿ ರಿಸಾರ್ಟ್ ಮೇಲೆ ದಾಳಿ ಮಾಡಿದ್ದು, 6 ಜನರನ್ನು ಬಂಧಿಸಿ ಕ್ರಮಕೈಗೊಂಡಿರುತ್ತಾರೆ. ಕೇರಳ ರಾಜ್ಯಕ್ಕೆ ಖೋಟಾ ನೋಟು ಸಾಗಾಣಿಕೆ ಮಾಡುತ್ತಿದ್ದ ವಾಹನದಿಂದ ರೂ. 8.00 ಲಕ್ಷ ಬೆಲೆಯ ಖೋಟಾ ನೋಟುಗಳನ್ನು ವಶಪಡಿಸಿಕೊಂಡಿರುತ್ತಾರೆ. 2004-05ರಲ್ಲಿ ವೀರಪ್ಪನ್ ವಿರುದ್ಧದ ಎಸ್‌ಟಿಎಫ್ ಕಾರ್ಯಾಚರಣೆಯಲ್ಲಿ ತಮಿಳುನಾಡು ರಾಜ್ಯದೊಂದಿಗೆ ಲಯಿಸನ್ ಅಧಿಕಾರಿಯಾಗಿ ಕೆಲಸ ನಿರ್ವಹಿಸಿರುತ್ತಾರೆ. ಮಾಗಡಿ ಠಾಣಾ ವ್ಯಾಪ್ತಿಯಲ್ಲಿ ನಡೆದಿದ್ದ ದರೋಡೆ ಪ್ರಕರಣವನ್ನು ಪತ್ತೆಹಚ್ಚಿ, ಆರೋಪಿಗಳಿಂದ ರೂ.4.00 ಲಕ್ಷ ಬೆಲೆಯ ಚಿನ್ನದ ಆಭರಣಗಳು, ಮತ್ತು ಇತರೆ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ. ಯಶವಂತಪುರ ಠಾಣೆಯ ಪ್ರಕರಣದಲ್ಲಿ ಆರೋಪಿಯನ್ನು ಹೈದರಾಬಾದಿನಲ್ಲಿ ಬಂಧಿಸಿ, 650 ಗ್ರಾಂ ಚಿನ್ನವನ್ನು ವಶಪಡಿಸಿಕೊಂಡಿರುತ್ತಾರೆ. ಲೋಕಾಯುಕ್ತ ಘಟಕದಲ್ಲಿದ್ದಾಗಲು ಹಲವು ಟ್ರಾಪ್ ಮತ್ತು ದಾಳಿಗಳನ್ನು ಮಾಡಿರುತ್ತಾರೆ. ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯ ಪ್ರಕರಣದಲ್ಲಿ ಮಾನವ ಕಳ್ಳಸಾಗಾಣಿಕೆ ನಡೆಸುತ್ತಿದ್ದ ಗುಂಪನ್ನು ಪತ್ತೆಹಚ್ಚಿ, 12 ಆರೋಪಿಗಳನ್ನು ಸೆರೆಹಿಡಿದು ಅವರಿಂದ 14 ಬಾಂಗ್ಲಾದೇಶಿಗರನ್ನು ರಕ್ಷಣೆ ಮಾಡಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಬಿ.ಆರ್ ವೇಣುಗೋಪಾಲ್**

ಎಸಿಪಿ, ಎಟಿಸಿ ಸೆಲ್,
ಬೆಂಗಳೂರು

ಇವರು 1994 ರಲ್ಲಿ ಪಿಎಸ್ಐ ಆಗಿ ಸೇವೆಗೆ ಸೇರಿದ್ದು, ಸೇವೆಗೆ ಸೇರಿದಾಗಿನಿಂದಲೂ ಒಬ್ಬ ಮಾದರಿ ಅಧಿಕಾರಿಯಾಗಿ ನಿಷ್ಠೆಯಿಂದ ಕರ್ತವ್ಯ ನಿರ್ವಹಿಸುತ್ತಿದ್ದು, ಅಪರಾಧಗಳನ್ನು ತಡೆಗಟ್ಟಲು ಮತ್ತು ಪತ್ತೆ ಹಚ್ಚುವ ಬಗ್ಗೆ ಹೆಚ್ಚಿನ ಗಮನ ನೀಡಿರುತ್ತಾರೆ. ಹಾಸನ ನಗರದಲ್ಲಿ ಕುಖ್ಯಾತ ಅಪರಾಧಿಗಳನ್ನು ಪತ್ತೆಹಚ್ಚಿ ಅವರಿಂದ ರೂ. 13 ಲಕ್ಷ ಮೌಲ್ಯದ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ. ಸೂಕ್ಷ್ಮ ಸ್ಥಳವಾದ ಹೊಳೆನರಸಿಪುರದಲ್ಲಿ 1999 ರಲ್ಲಿ ನಡೆದ ವಿಧಾನಸಭಾ ಚುನಾವಣಾ ಬಂದೋಬಸ್ತ್ ಕರ್ತವ್ಯವನ್ನು ಯಾವುದೇ ಘಟನೆಗೆ ಅವಕಾಶನೀಡದಂತೆ ಉತ್ತಮ ರೀತಿಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಬೇಲೂರಿನಲ್ಲಿ ಹಿಂದು ಮತ್ತು ಮುಸ್ಲಿಂರ ನಡುವಿನ ಘರ್ಷಣೆಯನ್ನು ಕೂಡಲೇ ನಿಯಂತ್ರಣಕ್ಕೆ ತಂದಿರುತ್ತಾರೆ. ಹುಣಸೂರು ಜೋಡಿ ಕೊಲೆ ಪ್ರಕರಣದ ತನಿಖೆಯನ್ನು ಸಹ ಉತ್ತಮ ರೀತಿಯಲ್ಲಿ ಕೈಗೊಂಡು ಆರೋಪಿಗಳನ್ನು ಪತ್ತೆ ಮಾಡಿ ಸೆರೆಹಿಡಿದಿರುತ್ತಾರೆ. ಶಾಂತಿ ಗ್ರಾಮ ಪೊಲೀಸ್ ಠಾಣೆಯ ವ್ಯಾಪ್ತಿಯ ಹೈವೇನಲ್ಲಿ ನಡೆದ ಡಕಾಯಿತಿ ಪ್ರಕರಣವನ್ನು ಒಂದು ವಾರದಲ್ಲಿ ಪತ್ತೆ ಮಾಡಿ, ಆರೋಪಿಗಳನ್ನು ಬಂಧಿಸಿರುತ್ತಾರೆ. ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಬಾಂಬ್ ಸ್ಫೋಟ ಪ್ರಕರಣದ ತಂಡದಲ್ಲಿಯು ಸಹ ಆರೋಪಿಗಳನ್ನು ಪತ್ತೆ ಮಾಡುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. ಅಲ್ಲದೇ 2012 ರಲ್ಲಿ ಉಗ್ರವಾದಿ ಸಂಘಟನೆಯ ಆರು ಸದಸ್ಯರನ್ನು ಸೆರೆಹಿಡಿದಿರುತ್ತಾರೆ. ಅನಧಿಕೃತ ಗಣಿಗಾರಿಕೆ ಪ್ರಕರಣದಲ್ಲಿನ ತನಿಖಾ ತಂಡದಲ್ಲಿಯು ಕರ್ತವ್ಯ ನಿರ್ವಹಿಸಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಕೆ.ಸಿ. ಲಕ್ಷ್ಮಿನಾರಾಯಣ**
ಡಿವೈಎಸ್‌ಪಿ,
ವಿಜಯಪುರ ಉಪ-ವಿಭಾಗ,
ವಿಜಯಪುರ ಜಿಲ್ಲೆ

ಇವರು 1999ರಲ್ಲಿ ಪಿಎಸ್ಐ ಆಗಿ ಸೇವೆಗೆ ಸೇರಿರುತ್ತಾರೆ. ಬೈಯಪ್ಪನಹಳ್ಳಿ ಪೊ.ಠಾಣೆ, ಮಡಿವಾಳ ಸಂಚಾರಿ ಪೊ.ಠಾಣೆ, ಸಿಐಡಿ, ಎಸಿಬಿ, ಲೋಕಾಯುಕ್ತ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಇವರ ಸೇವಾ ಅವಧಿಯಲ್ಲಿ ಸಾಕಷ್ಟು ಕಳುವು, ದರೋಡೆ ಪ್ರಕರಣಗಳನ್ನು ಪತ್ತೆ ಮಾಡಿದ್ದು, ರೌಡಿ ಚಟುವಟಿಕೆಗಳನ್ನು ನಿಗ್ರಹಿಸಿರುತ್ತಾರೆ. ಮಂಡಿವಾಳ ಸಂಚಾರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಹಲವು ಸಾಫ್ಟ್‌ವೇರ್ ಕಂಪನಿಗಳು ಬರುವುದರಿಂದ ಸಂಚಾರಿ ದಟ್ಟಣೆಯನ್ನು ನಿಯಂತ್ರಿಸಲು ಸಾಕಷ್ಟು ಸುಧಾರಣಾ ಕ್ರಮಗಳನ್ನು ಕೈಗೊಂಡಿದ್ದು, ರಸ್ತೆ ಅಪಘಾತ ಪ್ರಕರಣಗಳ ಸಂಖ್ಯೆಯಲ್ಲಿ ಇಳಿಮುಖವಾಗಿರುತ್ತದೆ ಹಾಗೂ ಸುಗಮ ಸಂಚಾರ ವ್ಯವಸ್ಥೆ ಮಾಡಿರುತ್ತಾರೆ. ಉಡುಪಿ ಎಂಎಲ್ಎ ಅಪಹರಣ ಪ್ರಕರಣದಲ್ಲಿ ಆರೋಪಿಗಳನ್ನು ಸೆರೆಹಿಡಿದಿರುತ್ತಾರೆ. ಇವರು ತನಿಖೆ ಕೈಗೊಂಡು ಮುಲ್ಕಿ ಪೊಲೀಸ್ ಠಾಣೆಯ ಬಾಲಕಿಯ ಮೇಲಿನ ಅತ್ಯಾಚಾರ ಪ್ರಕರಣದಲ್ಲಿ ಆರೋಪಿಗೆ ಶಿಕ್ಷೆಯಾಗಿರುತ್ತದೆ. ಲೋಕಾಯುಕ್ತದಲ್ಲಿದ್ದಾಗ ಹಲವು ಭ್ರಷ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ದಾಳಿಗಳನ್ನು ನಡೆಸಿರುತ್ತಾರೆ. ಕೆಐಎಡಿಬಿ ಹಗರಣದ ವಿಚಾರಣೆಯನ್ನು ಕೈಗೊಂಡಿರುತ್ತಾರೆ. ಸಂಚಾರ ನಿಯಮ ಉಲ್ಲಂಘಿಸಿದ ಪ್ರಕರಣಗಳಲ್ಲಿ ರೂ. 7 ಕೋಟಿ 79 ಲಕ್ಷ ದಂಡವನ್ನು ವಸೂಲು ಮಾಡಿರುತ್ತಾರೆ. ಎಸಿಬಿ ವಿಭಾಗದಲ್ಲಿಯೂ ಭ್ರಷ್ಟ ಅಧಿಕಾರಿಗಳ ವಿರುದ್ಧ ಟ್ರಾಪ್ ಮತ್ತು ದಾಳಿ ನಡೆಸಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಎಂ.ಕೆ ತಮ್ಮಯ್ಯ**
ಡಿವೈಎಸ್‌ಪಿ,
ಎಸಿಬಿ, ಬೆಂಗಳೂರು.

ಸದರಿಯವರು 1994ನೇ ಸಾಲಿನಲ್ಲಿ ಪಿ.ಎಸ್.ಐ. ಹುದ್ದೆಗೆ ನೇರ ನೇಮಕಾತಿಗೊಂಡಿದ್ದು, ತಮ್ಮ ವೃತ್ತಿ ಜೀವನದಲ್ಲಿ ದಕ್ಷತೆಯಿಂದ ಕರ್ತವ್ಯ ನಿರ್ವಹಿಸಿ ಹಲವಾರು ಸೂಕ್ಷ್ಮ, ಅತೀಸೂಕ್ಷ್ಮ ಪ್ರಕರಣಗಳನ್ನು ಭೇದಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಸದರಿಯವರು 2007ನೇ ಸಾಲಿನಲ್ಲಿ ಸಿ.ಸಿ.ಬಿ., ಬೆಂಗಳೂರು ನಗರದಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಪಾಕಿಸ್ತಾನದಲ್ಲಿ ತರಬೇತಿ ಪಡೆದಿದ್ದ ಎಲ್.ಇ.ಟಿ. ಭಯೋತ್ಪಾದಕರಾದ ಬೀಲಾಲ್ ಅಹಮ್ಮದ್ ಕೋಟ ಮತ್ತು ಅವನ ಸಹಚರರನ್ನು ಬಂಧಿಸಿ ಅವರಿಂದ ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ಹಲಸೂರು ಪೊಲೀಸ್ ಠಾಣೆ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಕೊಲೆ ಪ್ರಕರಣವನ್ನು ಭೇದಿಸಿ ಅಪರಾಧಿಗಳಿಗೆ ಶಿಕ್ಷೆ ಕೊಡಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ಸಿ.ಸಿ.ಬಿ., ಬೆಂಗಳೂರು ನಗರ ವಿಭಾಗದ ತಾಂತ್ರಿಕ ವಿಭಾಗದಲ್ಲಿ ಎ.ಸಿ.ಪಿ.ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಬೆಂಗಳೂರು ನಗರದ ಹಲವಾರು ಸೂಕ್ಷ್ಮ ಪ್ರಕರಣಗಳನ್ನು ಭೇದಿಸುವಲ್ಲಿ ತಾಂತ್ರಿಕ ಬೆಂಬಲವನ್ನು ನೀಡಿರುತ್ತಾರೆ ಹಾಗೂ ಐಸಿಸ್ ಉಗ್ರ ಸಂಘಟನೆಯ ಬಗ್ಗೆ ತನಿಖೆಯಲ್ಲಿ ಶ್ರಮಿಸಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಎಸ್.ಹೆಚ್. ಸುಬೇದಾರ್**

ಡಿವೈಎಸ್‌ಪಿ, ಐಜಿಪಿ ರವರ ಕಛೇರಿ,
ಈಶಾನ್ಯ ವಲಯ, ಕಲಬುರಗಿ

ಇವರು 1998ನೇ ಸಾಲಿನಲ್ಲಿ ಪಿ.ಎಸ್.ಐ. ಹುದ್ದೆಗೆ ನೇರ ನೇಮಕಾತಿ ಹೊಂದಿದ್ದು, 2007 ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಮುಂಬಡ್ತಿ ಹೊಂದಿರುತ್ತಾರೆ ಹಾಗೂ 2015 ರಲ್ಲಿ ಡಿವೈ.ಎಸ್.ಪಿ. ಹುದ್ದೆಗೆ ಮುಂಬಡ್ತಿ ಪಡೆದಿರುತ್ತಾರೆ. ಸದರಿಯವರು ಬಳ್ಳಾರಿ, ಕಲಬುರಗಿ, ಯಾದಗಿರಿ, ಬೆಳಗಾವಿ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು, ಅವರ ಕರ್ತವ್ಯದ ಅವಧಿಯಲ್ಲಿ ಅಪರಾಧ ಪ್ರಕರಣಗಳನ್ನು ಭೇದಿಸುವಲ್ಲಿ, ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಅಸಾಧಾರಣ ಸೇವೆ ಸಲ್ಲಿಸಿರುತ್ತಾರೆ. ಸದರಿಯವರು ಕರ್ತವ್ಯ ನಿರ್ವಹಿಸಿದ ಠಾಣೆಗಳಲ್ಲಿ ಅಪರಾಧ ಪ್ರಕರಣಗಳು ಹಾಗೂ ಡಕಾಯಿತಿ ಪ್ರಕರಣಗಳನ್ನು ಪತ್ತೆಹಚ್ಚಿ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ಸಿ.ಪಿ.ಐ. ಅಥಣಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಹಲವಾರು ಮನೆ ಕಳವು, ಕನ್ನ ಕಳವು, ವಾಹನ ಕಳವು ಪ್ರಕರಣಗಳನ್ನು ಪತ್ತಹಚ್ಚುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ಅಬಕಾರಿ ಜಾರಿ ಮತ್ತು ಲಾಟರಿ ನಿಷೇದ ದಳದಲ್ಲಿ ಪಿ.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ಕಾನೂನು ಬಾಹಿರ ಮದ್ಯ ತಯಾರಿಕ ಘಟಕಗಳ ಮೇಲೆ ದಾಳಿ ನಡೆಸಿ ಪ್ರಕರಣಗಳನ್ನು ದಾಖಲು ಮಾಡಿ ಮೇಲಾಧಿಕಾರಿಗಳಿಂದ ಪ್ರಶಂಸೆಗೆ ಒಳಗಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಡಾ. ಎಸ್ ಪ್ರಕಾಶ್**
ಡಿವೈಎಸ್‌ಪಿ,
ಐಜಿಪಿ ಕೇಂದ್ರ ವಲಯ ರವರ ಕಛೇರಿ,
ಬೆಂಗಳೂರು

ಸದರಿಯವರು 1996ನೇ ಸಾಲಿನಲ್ಲಿ ಪಿ.ಎಸ್.ಐ. ಹುದ್ದೆಗೆ ನೇರ ನೇಮಕಾತಿ ಹೊಂದಿದ್ದು, ಉತ್ತರ ಕನ್ನಡ, ಧಾರವಾಡ, ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ, ಬೆಂಗಳೂರು ನಗರ, ಸಿ.ಐ.ಡಿ., ಡಿ.ಸಿ.ಆರ್.ಇ., ಲೋಕಾಯುಕ್ತ ಮತ್ತು ರಾಜ್ಯ ಗುಪ್ತವಾರ್ತೆ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಸದರಿಯವರು 2002 ರಿಂದ 2004ನೇ ಅವಧಿಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಹಳೇ ಹುಬ್ಬಳ್ಳಿ ಪೊಲೀಸ್ ಠಾಣೆ, ಹುಬ್ಬಳ್ಳಿ ನಗರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಸದರಿ ಠಾಣಾ ವ್ಯಾಪ್ತಿಯಲ್ಲಿ ದಾಖಲಾದ ಹಲವಾರು ಡಕಾಯಿತಿ ಪ್ರಕರಣಗಳನ್ನು ಪತ್ತಹಚ್ಚಿ ಅಪಾರ ಪ್ರಮಾಣದ ಸಾರ್ವಜನಿಕ ಆಸ್ತಿಯನ್ನು ಅಪರಾಧಿಗಳಿಂದ ವಶಪಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ಸಿ.ಐ.ಡಿ. ವಿಭಾಗದ ವರದಕ್ಷಿಣೆ ನಿಷೇದ ದಳದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ನಾಲ್ಕು ಪ್ರಮುಖ ವರದಕ್ಷಿಣೆ ಕಿರುಕುಳ ಪ್ರಕರಣಗಳ ತನಿಖೆ ನಡೆಸಿ ಅಪರಾಧಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಕೊಡಿಸುವಲ್ಲಿ ಶ್ರಮಿಸಿರುತ್ತಾರೆ. ಇವರು 2011 ರಿಂದ 2013 ರವರೆಗೆ ನೆಲಮಂಗಲ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸಿದ್ದು, ಅಲ್ಲಿ ಹಲವಾರು ಕೊಲೆ, ಡಕಾಯಿತಿ ಪ್ರಕರಣ ಹಾಗೂ ಕಳವು ಪ್ರಕರಣಗಳನ್ನು ಪತ್ತೆಹಚ್ಚುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ಎ.ಸಿ.ಪಿ. ಕೆಂಗೇರಿಗೇಟ್ ಉಪ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಪತ್ರಕರ್ತೆ ಗೌರಿ ಲಂಕೇಶ್ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ತನಿಖೆ ನಡೆಸುವಲ್ಲಿ ಅಸಾಧಾರಣ ಸೇವೆ ಸಲ್ಲಿಸಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಕೆ.ಎಸ್ ಸುಂದರ್‌ರಾಜ್**

ಡಿವೈಎಸ್‌ಪಿ,
ಹುಣಸೂರು ಉಪ-ವಿಭಾಗ,
ಮೈಸೂರು ಜಿಲ್ಲೆ

ಇವರು 1994ನೇ ಸಾಲಿನಲ್ಲಿ ಪಿ.ಎಸ್.ಐ. ಹುದ್ದೆಗೆ ನೇರ ನೇಮಕಾತಿ ಹೊಂದಿದ್ದು, ಪ್ರಾಯೋಗಿಕ ತರಬೇತಿಯ ನಂತರ ಇವರು ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ 4 ವರ್ಷಕ್ಕೂ ಅಧಿಕ ಸೇವೆಯನ್ನು ಸಲ್ಲಿಸಿರುತ್ತಾರೆ. ಆ ಅವಧಿಯಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು, ಅಪರಾಧ ಪ್ರಕರಣಗಳನ್ನು ತಡೆಗಟ್ಟುವಲ್ಲಿ ಹಾಗೂ ಭೇದಿಸುವಲ್ಲಿ ಉತ್ತಮ ಕರ್ತವ್ಯ ನಿರ್ವಹಿಸಿರುತ್ತಾರೆ. 2001 ರಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಹುದ್ದೆಗೆ ಮುಂಬಡ್ತಿ ಹೊಂದಿದ್ದು, ಕೊಡಗು ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಅನಧಿಕೃತವಾಗಿ ಬೆಳೆಸಲಾದ ಗಾಂಜಾ, ನಾಡ ಬಂದೂಕು ತಯಾರಿಕ ಘಟಕಗಳು, ಹಸು ಸಾಗಾಣಿ, ಮರಳು ಮಾಫಿಯಾ, ಜೂಜು ಅಡ್ಡಗಳ ಮೇಲೆ ದಾಳಿ ನಡೆಸಿ ಪ್ರಕರಣಗಳನ್ನು ದಾಖಲು ಮಾಡಿರುತ್ತಾರೆ. 2002ರಲ್ಲಿ ಕೊಡಗು ಜಿಲ್ಲೆಯಲ್ಲಿ ನಡೆದಂತಹ ಹಿಂದೂ-ಮುಸ್ಲಿಂ ಮತೀಯ ಗಲಬೆಯನ್ನು ಹತೋಟಿಗೆ ತಂದು ಶಾಂತಿ ಸ್ಥಾಪಿಸಲು ಶ್ರಮಿಸಿರುತ್ತಾರೆ. 2008 ರಲ್ಲಿ ಹುಣಸೂರಿನಲ್ಲಿ ಸಿ.ಪಿ.ಐ. ಆಗಿ ಕರ್ತವ್ಯ ನಿರ್ವಹಿಸುತ್ತಿರುವಾಗ ರೈತರು ಗೊಬ್ಬರ ಬಿತ್ತನೆ ಬೀಜಗಳ ಹಂಚಿಕೆ ವಿಷಯವಾಗಿ ಧರಣಿ ನಡೆಸಿದ್ದು, ಸದರಿ ಧರಣಿಯನ್ನು ಶಾಂತ ರೀತಿ ಮುಕ್ತಾಯಗೊಳಿಸುವಲ್ಲಿ ಯಶಸ್ವಿಯಾಗಿರುತ್ತಾರೆ ಹಾಗೂ ಮೈಸೂರು ಜಿಲ್ಲೆಯಲ್ಲಿ ನಡೆದಂತಹ ಹಲವಾರು ಮತೀಯ ಗಲಬೆ ಪ್ರಕರಣ ಹತೋಟಿಗೆ ತರುವಲ್ಲಿ ಯಶಸ್ವಿಯಾಗಿದ್ದು, ಮೈಸೂರು ಜಿಲ್ಲೆಯ ಉತ್ತಮ ವೃತ್ತ ನಿರೀಕ್ಷಕರು ಎಂಬ ಹೆಗ್ಗಳಿಕೆಗೆ ಪಾತ್ರರಾಗಿರುತ್ತಾರೆ. 2017 ರಲ್ಲಿ ಮಡಿಕೇರಿ ದಸರಾ ಆಚರಣೆಯಲ್ಲಿ ನಡೆದ ಮತೀಯ ಗಲಭೆಯಲ್ಲಿ ಅಪರಾಧಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ. 2015 ರಲ್ಲಿ ಮಡಿಕೇರಿ ನಗರದಲ್ಲಿ ಟಿಪ್ಪು ಜಯಂತಿ ಆಚರಣೆಯ ಸಮಯದಲ್ಲಿ ಉಂಟಾದ ಗಲಭೆ ನಿಯಂತ್ರಿಸಿ ಪರಿಸ್ಥಿತಿಯನ್ನು ನಿಯಂತ್ರಣಕ್ಕೆ ತಂದಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ರಾಮರಾವ್ ಕೋತವಾಲ್**

ಡಿವೈಎಸ್‌ಪಿ,
ಕೆಎಲ್‌ಎ, ಗದಗ

ಸದರಿಯವರು 1996ನೇ ಸಾಲಿನಲ್ಲಿ ಪಿ.ಎಸ್.ಐ. ಹುದ್ದೆಗೆ ನೇರ ನೇಮಕಾತಿ ಹೊಂದಿದ್ದು, ಪೊಲೀಸ್ ಇಲಾಖೆ ಸೇರುವ ಮೊದಲು 1985 ರಿಂದ 1995 ರವರೆಗೆ ಕೇಂದ್ರ ಸರ್ಕಾರದ ಸಂಘಟನೆಗಳಾದ ಸಿ.ಆರ್.ಪಿ.ಎಫ್., ಆರ್.ಪಿ.ಎಫ್. ಮತ್ತು ಎನ್.ಎಸ್.ಜಿ. ಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಇವರು ಪಿ.ಎಸ್.ಐ. ಹುದ್ದೆಯಲ್ಲಿ ಪ್ರಾಯೋಗಿಕ ತರಬೇತಿಯ ನಂತರ ದಕ್ಷಿಣ ಕನ್ನಡ ಜಿಲ್ಲೆ, ಉಡುಪಿ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಕರ್ತವ್ಯ ನಿರ್ವಹಿಸಿದ್ದು, ಹಲವಾರು ಮತೀಯ ಗಲಭೆ ಪ್ರಕರಣಗಳನ್ನು ತಿಳಿಗೊಳಿಸುವಲ್ಲಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಇವರು ಶಿವಮೊಗ್ಗ, ಬಳ್ಳಾರಿ, ಬೆಂಗಳೂರು ನಗರ ಘಟಕಗಳಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸಿದ್ದು, ಕಾನೂನು ಸುವ್ಯವಸ್ಥೆ ಕಾಪಾಡುವ ದೃಷ್ಟಿಯಿಂದ ಹಾಗೂ ಅಪರಾಧ ಪ್ರಕರಣಗಳ ತನಿಖೆಯಲ್ಲಿ ಯಶಸ್ವಿಯಾಗಿ ಕರ್ತವ್ಯ ನಿರ್ವಹಿಸಿದ್ದು ಅಪರಾಧಿಗಳಿಗೆ ಶಿಕ್ಷೆಕೊಡಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಇವರು ಮಂಗಳೂರು ನಗರದಲ್ಲಿ ಸಂಚಾರ ವಿಭಾಗದ ಇನ್ಸ್‌ಪೆಕ್ಟರ್ ಆಗಿ ಪೂರ್ವ ಮತ್ತು ಪಶ್ಚಿಮ ಸಂಚಾರ ಪೊಲೀಸ್ ಠಾಣೆಗಳ ಪ್ರಭಾರವನ್ನು ಏಕಕಾಲದಲ್ಲಿ ನಿರ್ವಹಿಸಿದ್ದು, ಮಂಗಳೂರು ನಗರ ಸಂಚಾರ ವ್ಯವಸ್ಥೆಯನ್ನು ರೂಪಿಸುವಲ್ಲಿ ಶ್ರಮಿಸಿರುತ್ತಾರೆ. ಇವರು ಎ.ಸಿ.ಪಿ., ದಕ್ಷಿಣ ಉಪ ವಿಭಾಗ, ಮಂಗಳೂರು ನಗರದಲ್ಲಿ ಕರ್ತವ್ಯ ನಿರ್ವಹಿಸಿದ್ದು, ಇವರ ಉಪ ವಿಭಾಗದ ವ್ಯಾಪ್ತಿಯು ಕೇರಳ ರಾಜ್ಯದ ಗಡಿಭಾಗವನ್ನು ಹೊಂದಿದ್ದು, ಆ ರಾಜ್ಯದಿಂದ ಮಂಗಳೂರು ನಗರಕ್ಕೆ ಸಾಗಿಸುತ್ತಿದ್ದ ಮಾದಕ ವಸ್ತುಗಳನ್ನು ವಶಪಡಿಸಿಕೊಂಡು ಕಳ್ಳ ಸಾಗಾಟವನ್ನು ನಿಯಂತ್ರಿಸುವಲ್ಲಿ ಯಶಸ್ವಿಯಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ






**ಶ್ರೀ ಎಂ.ಎನ್. ರುದ್ರಪ್ಪ**

ಎಸಿಪಿ, ಧಾರವಾಡ ಉಪ–ವಿಭಾಗ,
ಹುಬ್ಬಳ್ಳಿ–ಧಾರವಾಡ ನಗರ (ನಿವೃತ್ತಿ)

ಇವರು 1994ನೇ ಸಾಲಿನಲ್ಲಿ ಸಬ್-ಇನ್ಸ್‌ಪೆಕ್ಟರ್ ಆಗಿ ಪೊಲೀಸ್ ಪಡೆಗೆ ಸೇರಿದ್ದಾರೆ. ಪೊಲೀಸ್ ಇಲಾಖೆಯಲ್ಲಿ ಅವರ ಸುದೀರ್ಘ ವರ್ಷಗಳ ಸೇವೆಯಲ್ಲಿ ಅವರು ಕರ್ತವ್ಯಕ್ಕೆ ಸಮರ್ಪಣೆ ಮತ್ತು ಸಂಸ್ಥೆಗೆ ನಿಷ್ಠೆ ತೋರಿಸಿದ್ದಾರೆ. ಅವರು 1998ರಲ್ಲಿ ಗೋಕರ್ಣ ಪಿಎಸ್ ನಲ್ಲಿ ದಾಖಲಾದ ಪ್ರಕರಣವನ್ನು ತನಿಖೆ ಮಾಡಿದರು ಮತ್ತು ಆರೋಪಿಗಳನ್ನು ಬಂಧಿಸಿ (170 ಗ್ರಾಂ ಚಿನ್ನ) ರೂ.69,200/- ಮೌಲ್ಯದ ಆಭರಣಗಳನ್ನು ವಶಪಡಿಸಿಕೊಂಡರು. ಅದೇ ರೀತಿ ಹರಪ್ಪನಗಳ್ಳಿ ತಾಲ್ಲೂಕು ಹಲ್ವಾಗಲು ಪಿಎಸ್‌ನಲ್ಲಿ ದಾಖಲಾದ ಪ್ರಕರಣವನ್ನು ಅಲ್ಪಾವಧಿಯಲ್ಲಿ ಆರೋಪಿಗಳನ್ನು ತನಿಖೆ ಮಾಡಿ ಬಂಧಿಸಿದ್ದಾರೆ. ಹೊನ್ನಾಳಿ ಪಿಎಸ್‌ನಲ್ಲಿ ರೂ.29,00,000/- ಮೌಲ್ಯದ ಚಿನ್ನಾಭರಣ ಮತ್ತು ಬೆಳ್ಳಿ ಸಾಮಾನುಗಳನ್ನು ಬಿಡಿಸಲು ಶ್ರಮ ವಹಿಸಿರುತ್ತಾರೆ. 70 ಲಕ್ಷ ಮೌಲ್ಯದ 19 ಬಗೆಯ ವಿವಿಧ ವಾಹನಗಳನ್ನು ವಶಪಡಿಸಿಕೊಂಡು ಜಿಲ್ಲಾ ಎಸ್‌ಪಿ ರವರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಕಳ್ಳತನ ಪ್ರಕರಣಗಳ ಮೇಲ್ವಿಚಾರಣೆ ನಡೆಸಿ ಆರೋಪಿಗಳ ತನಿಖೆ ಮತ್ತು ಬಂಧನ, ಆಸ್ತಿ ಮೌಲ್ಯ ರೂ.11,41,835/- ಗಳನ್ನು ವಶಪಡೆದಿರುತ್ತಾರೆ. ಇವರು ಹೋಳಿ ಹಬ್ಬ ಮತ್ತು ಈದ್-ಮಿಲಾದ್ ಮೆರವಣಿಗೆಯ ಸಮಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಸೂಕ್ತವಾಗಿ ನಿರ್ವಹಿಸುವಲ್ಲಿ ಯಶಸ್ವಿಯಾಗಿರುತ್ತಾರೆ. ಅದೇ ರೀತಿ 1999ರಲ್ಲಿ ಹಿಂದೂ ಮಹಾಸಭಾ ಗಣಪತಿ ವಿಗ್ರಹ ಮುಳುಗಿಸುವಿಕೆಯ ಬಗ್ಗೆ ಉತ್ತಮ ಬಂದೋಬಸ್ತ್ ಕರ್ತವ್ಯವನ್ನು ನಿರ್ವಹಿಸಿದರು. ಅವರು ಸಬ್‌ಡಿವಿಜನ್ ಪೊಲೀಸ್ ಠಾಣೆಯಲ್ಲಿ ಎಸ್‌ಸಿ/ ಎಸ್‌ಟಿ ಮತ್ತು ಡಿಪಿ ಪ್ರಕರಣಗಳನ್ನು ಉತ್ತಮವಾಗಿ ವಿಲೇವಾರಿ ಮಾಡಿದ್ದಾರೆ. 2018 ರ ಅಸೆಂಬ್ಲಿ ಚುನಾವಣೆಯ ಮೇಲ್ವಿಚಾರಣೆ ಮತ್ತು 2019ನೇ ಲೋಕಸಭಾ ಚುನಾವಣೆಯಲ್ಲಿ ಯಾವುದೇ ಕಾನೂನು ಉಲ್ಲಂಘನೆಯ ಪ್ರಕರಣ ದಾಖಲಾಗದಂತೆ ಮೇಲ್ವಿಚಾರಣೆ ಮಾಡಿದ್ದಾರೆ. ಇವರು ಉತ್ತಮ ಕಾರ್ಯಕ್ಕಾಗಿ ಅವರನ್ನು ಮೇಲಾಧಿಕಾರಿಗಳು ನಗದು ಪುರಸ್ಕಾರಗಳೊಂದಿಗೆ ಪ್ರಶಂಸಿಸಿದ್ದಾರೆ

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಜಿ.ಎಂ. ತಿಪ್ಪೇಸ್ವಾಮಿ**
ಡಿವೈಎಸ್‌ಪಿ,
ಡಿಎಆರ್, ಚಿತ್ರದುರ್ಗ ಜಿಲ್ಲೆ

ಇವರು 1999ನೇ ಸಾಲಿನಲ್ಲಿ ಆರ್‌ಎಸ್‌ಐ ಆಗಿ ಪೊಲೀಸ್ ಇಲಾಖೆಗೆ ಸೇರಿರುತ್ತಾರೆ. ಅವರು ಡಿಎಆರ್ ಬಳ್ಳಾರಿ ಮತ್ತು ಕಲಬುರಗಿಯಲ್ಲಿ ಆರ್‌ಎಸ್‌ಐ ಆಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ನಂತರ ಇವರು ಆರ್‌ಪಿಐ ಆಗಿ ಮುಂಬಡ್ತಿ ಹೊಂದಿ ರಾಯಚೂರು, ಬಳ್ಳಾರಿ ಮತ್ತು ಚಿತ್ರದುರ್ಗ ಡಿಎಆರ್ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಡಿವೈಎಸ್‌ಪಿ ಆಗಿ ಬಡ್ತಿ ಪಡೆದು ಡಿಎಆರ್ ಚಿತ್ರದುರ್ಗದಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಮೊದಲಿನಿಂದಲೂ ಈ ಅಧಿಕಾರಿ ತನ್ನ ಕರ್ತವ್ಯಗಳಲ್ಲಿ ಶ್ರಮ, ಅಪಾರ ಉತ್ಸಾಹ, ಉಪಕ್ರಮವನ್ನು ತೋರಿಸಿದ್ದಾರೆ. 18 ವರ್ಷಗಳ ಅವರ ಸೇವೆಯ ಅವಧಿಯಲ್ಲಿ ಇವರು ಉತ್ತಮ ದಾಖಲೆಯನ್ನು ಉಳಿಸಿಕೊಂಡರು ಮತ್ತು ಹೆಚ್ಚಿನ ಕರ್ತವ್ಯ ಮತ್ತು ಶೌರ್ಯವನ್ನು ಪ್ರದರ್ಶಿಸಿದರು. ಉದಾಹರಣೆಗೆ 1. ಡಿಎಆರ್ ಚಿತ್ರದುರ್ಗದಲ್ಲಿ 20 ಪೊಲೀಸ್ ಸಿಬ್ಬಂದಿಯನ್ನು ಒಳಗೊಂಡ ಕ್ಯೂಆರ್‌ಟಿ ಪ್ಲಟೂನ್‌ನ್ನು ಸ್ಥಾಪಿಸಿದರು. ಅವರಿಗೆ ದೈಹಿಕ ವ್ಯಾಯಾಮ, ಜನಸಮೂಹ ಕಾರ್ಯಾಚರಣೆ, ಜನಸಂದಣಿ ನಿಯಂತ್ರಣ, ಡಿ-ಬಸ್, ಎಂ-ಬಸ್ ಮತ್ತು ಅತ್ಯಾಧುನಿಕ ಶಸ್ತ್ರಾಸ್ತ್ರಗಳ ನಿರ್ವಹಣೆ ಮತ್ತು ಯಾವುದೇ ಸಂಭವನೀಯತೆಗಳನ್ನು ಪೂರೈಸಲು ಯಾವುದೇ ಕಾನೂನು ಮತ್ತು ಸುವ್ಯವಸ್ಥೆ ಸಂದರ್ಭಗಳನ್ನು ನಿಭಾಯಿಸುವುದು. ಶ್ವಾನ ದಳಗಳು 5 ಪ್ರತಿದಿನ ಈ ಶ್ವಾನ ತಂಡಗಳಿಗೆ ನಿರಂತರ ತರಬೇತಿಯಿಂದಾಗಿ ರಾಜ್ಯ ಮಟ್ಟದಲ್ಲಿ ಪತ್ತೆಹಚ್ಚುವಲ್ಲಿ ಅಗಸ್ತ್ಯ ಎಂಬ ಪ್ರಥಮ ಬಹುಮಾನ ಮತ್ತು ರಾಷ್ಟ್ರಮಟ್ಟದಲ್ಲಿ ಎರಡನೇ ಬಹುಮಾನ ದೊರಕಿತು ಯಾವುದೇ ದೂರುಗಳ ಅವಕಾಶ ನೀಡದೇ ಪರಿಣಾಮಕಾರಿ ಬಂದೋಬಸ್ತ್‌ನ್ನು ನಿರ್ವಹಿಸಿರುತ್ತಾರೆ. ಅಖಿಲ ಭಾರತ ಪೊಲೀಸ್ ಬ್ಯಾಡ್‌ಮಿಂಟನ್ ಚಾಂಪಿಯನ್‌ಶಿಪ್-2018 ರ ಪೊಲೀಸ್ ಮೀಟ್‌ನಲ್ಲಿ ಇವರು ಮಿಶ್ರ ಡಬಲ್ಸ್‌ನಲ್ಲಿ ಮೂರನೇ ಬಹುಮಾನವನ್ನು ಗೆದ್ದಿದ್ದಾರೆ. ಬೃಹತ್ ರೈತರ ಸಮಾವೇಶ-2018 ರಲ್ಲಿ ಎಸ್‌ಪಿ, ದಾವಣಗೆರೆ ರವರಿಂದ ಪ್ರಶಂಸೆಗೆ ಪಾತ್ರರಾಗಿರುತ್ತಾರೆ. ಈ ಅಧಿಕಾರಿ ಅತ್ಯುತ್ತಮ ಬಂದೋಬಸ್ತ್‌ನ್ನು ನಿರ್ವಹಿಸಿದರು ಮತ್ತು ಸೂಕ್ಷ್ಮ ಸ್ಥಳಗಳಿಗೆ ಸರಿಯಾಗಿ ಡಿಎಆರ್, ಕೆಎಸ್‌ಆರ್‌ಪಿ ಮತ್ತು ಕ್ಯೂಆರ್‌ಟಿ ಪ್ಲಟೂನ್‌ಗಳನ್ನು ನಿಯೋಜಿಸುವ ಮೂಲಕ ಶಾಂತಿ ಮತ್ತು ಸೌಹಾರ್ದತೆಯನ್ನು ಕಾಪಾಡುವಲ್ಲಿ ಯಶಸ್ವಿಯಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಬಿ.ಎಸ್. ಬಸವರಾಜು**

ಡಿವೈಎಸ್‌ಪಿ,
ಡಿಸಿಆರ್‌ಬಿ, ದಾವಣಗೆರೆ

ಇವರು 2001 ರಲ್ಲಿ ಪಿಎಸ್‌ಐ ಆಗಿ ಸೇವೆಗೆ ಸೇರಿರುತ್ತಾರೆ. ಇವರು ಸುಧಾರಿತ ತಂತ್ರಜ್ಞಾನವನ್ನು ಅಳವಡಿಸಿಕೊಂಡು ಹಲವು ಕಳುವು ಪ್ರಕರಣಗಳನ್ನು ಪತ್ತೆ ಮಾಡಿ, ವಶಪಡಿಸಿಕೊಂಡ ಮಾಲನ್ನು ಫಿರ್ಯಾದುದಾರರಿಗೆ ಹಿಂದಿರುಗಿಸಿರುತ್ತಾರೆ. ಇವರ ಕರ್ತವ್ಯವನ್ನು ಪ್ರಶಂಸಿಸಿ 2009 ರಲ್ಲಿ ಅಪರಾಧ ಪ್ರಕರಣಗಳ ಪತ್ತೆಗಾಗಿ ಮೊದಲ ಬಹುಮಾನವನ್ನು ನೀಡಲಾಗಿರುತ್ತದೆ. ಹಿರೆನ್‌ಶಿಖಾರಿಗಳ ಗುಂಪಿನ ಬಲೆಗೆ ಬಿದ್ದು ಕೊಲೆಯಾಗಿದ್ದ ಪ್ರಮುಖ ಪ್ರಕರಣವನ್ನು ಪತ್ತೆಮಾಡಿರುತ್ತಾರೆ. ಸದರಿ ಗುಂಪು ಕಾಡಿನಲ್ಲಿ ಅಲೆದಾಡುವ ಮತ್ತು ಸಾರ್ವಜನಿಕ ಪ್ರದೇಶದಲ್ಲಿ ಇವರ ಉಪಸ್ಥಿತಿಯು ಅಪಾಯಕಾರಿಯಾಗಿರುತ್ತದೆ. ಇವರ ನೆಲೆಯು ಕರ್ನಾಟಕ ರಾಜ್ಯ, ಆಂದ್ರಪ್ರದೇಶ, ಮಹಾರಾಷ್ಟ್ರ ಮತ್ತು ಗೋವಾ ರಾಜ್ಯಗಳಲ್ಲಿ ವ್ಯಾಪಿಸಿರುತ್ತದೆ. ಇಂತಹ ಭಯಾನಕ ಅಪರಾಧಿಗಳನ್ನು ಸೆರೆಹಿಡಿದು ಧೈರ್ಯವನ್ನು ಪ್ರದರ್ಶಿಶಿಸಿರುತ್ತಾರೆ. ಇವರ ಈ ಕಾರ್ಯವನ್ನು ಹಿರಿಯ ಅಧಿಕಾರಿಗಳು ಮೆಚ್ಚಿರುತ್ತಾರೆ. ಅಲ್ಲದೇ ಕೊರಚ ಸಮುದಾಯದವರು ನಕಲಿ ಚಿನ್ನದ ನಾಣ್ಯಗಳನ್ನು ಜನರಿಗೆ ಮೋಸದಿಂದ ಮಾರಾಟ ಮಾಡುತ್ತಿದ್ದ ಜಾಲವನ್ನು ಪತ್ತೆ ಮಾಡಿರುತ್ತಾರೆ. ಬುಡಕಟ್ಟು ಜನಾಂಗದವರು ದೇವರ ಹೆಸರಿನಲ್ಲಿ ಮಹಿಳೆಯರ ಮೇಲೆ ಶೋಷಣೆ ಮಾಡುತ್ತಿದ್ದ ಪದ್ದತಿಗಳನ್ನು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಹಯೋಗದೊಂದಿಗೆ ನಿರ್ಮೂಲನೆ ಮಾಡಿರುತ್ತಾರೆ. ಹಲವು ಪ್ರಮುಖ ಘೋರ ಪ್ರಕರಣಗಳನ್ನು ಪತ್ತೆಹಚ್ಚಿದ್ದು ಅಲ್ಲದೇ ಪೋಲೀಸ್ ಕಲ್ಯಾಣದ ಬಗ್ಗೆಯು ಗಮನಹರಿಸಿ ಅವರ ಕುಂದುಕೊರತೆಗಳನ್ನು ನಿವಾರಿಸುವ ಬಗ್ಗೆ ಹಾಗೂ ಕ್ರೀಡೆ ಮತ್ತು ಇತರೆ ಕಾರ್ಯಕ್ರಮಗಳನ್ನು ಆಯೋಜಿಸಿರುತ್ತಾರೆ. ಹಿರೇನ್ ಶಿಕಾರಿ ಗ್ಯಾಂಗ್ ಬಗ್ಗೆ ಒಂದು ಪುಸ್ತಕವನ್ನು ಸಹ ಬರೆದಿರುತ್ತಾರೆ. ಇವರು ಒಬ್ಬ ಶಿಸ್ತುಬದ್ಧ ಮತ್ತು ದಕ್ಷ ಪೋಲೀಸ್ ಅಧಿಕಾರಿಯಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೋಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಕಲ್ಲಪ್ಪ ಎಸ್. ಖರಾತ್**

ಪಿಐ, ಚಿಕ್ಕಪೇಟೆ ಸಂಚಾರಿ ಪೊಲೀಸ್ ಠಾಣೆ,
ಬೆಂಗಳೂರು ನಗರ

ಇವರು 1994 ನೇ ಸಾಲಿನಲ್ಲಿ ಇಲಾಖೆಗೆ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗೆ ನೇಮಕಗೊಂಡು, ನಂತರದಲ್ಲಿ 2003 ನೇ ಸಾಲಿನಲ್ಲಿ ಸದರಿಯವರು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ಹುದ್ದೆಗೆ ನೇರ ನೇಮಕಾತಿಗೊಂಡು ಪ್ರಸ್ತುತ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಬಡ್ತಿ ಹೊಂದಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿಯವರು ಅವರ ಸೇವಾ ಅವಧಿಯಲ್ಲಿ ಸಮರ್ಪಣಾ ಭಾವದಿಂದ ಕರ್ತವ್ಯ ನಿರ್ವಹಿಸಿ ಹೆಚ್ಚಿನ ಸಂಖ್ಯೆಯಲ್ಲಿ ಸೂಕ್ಷ್ಮ ಪ್ರಕರಣಗಳನ್ನು ಭೇದಿಸಿರುತ್ತಾರೆ. ಅಲ್ಲದೇ ಸದರಿಯವರಿಗೆ ವಹಿಸಿರುವ ಬಂದೋಬಸ್ತ ಕರ್ತವ್ಯವನ್ನು ಹಾಗೂ ಅವರು ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಯವ್ಯಾಪ್ತಿಯಲ್ಲಿ ಧರಣಿ, ಮೆರವಣಿಗೆ ಸಂಧರ್ಭದಲ್ಲಿ ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಸುಗಮವಾಗಿರುವಂತೆ ಕಾಪಾಡಿರುತ್ತಾರೆ. ಸದರಿಯವರು ಜೂಜುಕೋರರ ಅಡ್ಡೆಯ ಮೇಲೆ ದಾಳಿ ಮಾಡಿ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಇವರ ಕರ್ತವ್ಯ ನಿಷ್ಠೆಗೆ ಬಹುಮಾನಗಳನ್ನು, ಪ್ರಶಂಸನಾ ಪತ್ರಗಳನ್ನು, ಹೊಗಳಿಕೆ ಪತ್ರಗಳನ್ನು ಉತ್ತಮ ಸೇವಾ ಪತ್ರಗಳನ್ನು ನೀಡಲಾಗಿರುತ್ತದೆ ಹಾಗೂ ಇವರ ಸೇವೆಗೆ ಬೃಹತ ಬೆಂಗಳೂರು ಮಹಾನಗರ ಪಾಲಿಕೆ ವತಿಯಿಂದ ಸದರಿಯವರಿಗೆ "ನಾಡ ಪ್ರಭು ಕೆಂಪೇಗೌಡ ಪ್ರಶಸ್ತಿ" ಯನ್ನು ನೀಡಲಾಗಿರುತ್ತದೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಬಿ.ಜಿ. ಕುಮಾರಸ್ವಾಮಿ**
ಪಿಐ, ಸಿಟಿ ಮಾರ್ಕೆಟ್ ಪೊಲೀಸ್ ಠಾಣೆ,
ಬೆಂಗಳೂರು ನಗರ

ಇವರು 1996 ನೇ ಸಾಲಿನಲ್ಲಿ ಇಲಾಖೆಗೆ ನೇಮಕಾತಿಗೊಂಡು ಪ್ರಸ್ತುತ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿಯವರು 2003 ನೇ ಸಾಲಿನಲ್ಲಿ ನಡೆದ, Annual Police Duty Meet ನಲ್ಲಿ ಭಾಗವಹಿಸಿ ಕಂಪ್ಯೂಟರ್ ಬಗ್ಗೆ ಅರಿವನ್ನು ಮೂಡಿಸಿ ಬಂಗಾರದ ಪದಕ ಮತ್ತು ಬೆಳ್ಳಿ ಪದಕವನ್ನು ಪಡೆದಿರುತ್ತಾರೆ. ಅಲ್ಲದೇ ಸದರಿಯವರಿಗೆ ವಹಿಸಿರುವ ಬಂದೋಬಸ್ತ ಕರ್ತವ್ಯವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಸುಗಮವಾಗಿರುವಂತೆ ಕಾಪಾಡಿರುತ್ತಾರೆ. 2008 ನೇ ಸಾಲಿನಲ್ಲಿ ಗಂಧದ ಮರಗಳ್ಳರನ್ನು ಬಂಧಿಸುವಲ್ಲಿ ಹಾಗೂ ಸೂಕ್ಷ್ಮ ಕೊಲೆ, ದರೋಡೆ ಮತ್ತು ಇನ್ನಿತರೆ ಪ್ರಕರಣಗಳನ್ನು ಬೇಧಿಸಿರುತ್ತಾರೆ. ಸದರಿಯವರ ಕಾರ್ಯ ವೈಖರಿಯನ್ನು ಮೆಚ್ಚಿ 2013 ನೇ ಸಾಲಿನಲ್ಲಿ ಮಾನ್ಯ ಮುಖ್ಯ ಮಂತ್ರಿಗಳ ಪದಕವನ್ನು ನೀಡಿ ಗೌರವಿಸಲಾಗಿರುತ್ತದೆ. ಗೌರಿ ಲಂಕೇಶ್ ರವರ ಕೊಲೆ ಪ್ರಕರಣದಲ್ಲಿ ಇವರನ್ನು ವಿಶೇಷ ತನಿಖಾ ತಂಡದಲ್ಲಿ ಅಧಿಕಾರಿಯವರನ್ನಾಗಿ ಸರ್ಕಾರದಿಂದ ನೇಮಕ ಮಾಡಲಾಗಿರುತ್ತದೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಎಸ್.ಡಿ. ಶಶಿಧರ್**

ಪಿಐ, ಡಿಸಿಆರ್‌ಇ
ಬೆಂಗಳೂರು.

ಇವರು 1999 ನೇ ಸಾಲಿನಲ್ಲಿ ಇಲಾಖೆಗೆ ಪಿ.ಎಸ್.ಐ ಆಗಿ ನೇಮಕಾತಿಗೊಂಡು ಪ್ರಸ್ತುತ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಅವರು ಕರ್ತವ್ಯ ನಿರ್ವಹಿಸುತ್ತಿರುವ ಕಾರ್ಯವ್ಯಾಪ್ತಿಯಲ್ಲಿ ಪರಿಣಾಮಕಾರಿಯಾಗಿ ಕರ್ತವ್ಯ ನಿರ್ವಹಿಸಿ ಕಾನೂನು ಮತ್ತು ಸುವ್ಯವಸ್ಥೆಯನ್ನು ಸುಗಮವಾಗಿರುವಂತೆ ಕಾಪಾಡಿರುತ್ತಾರೆ. ಹೆಚ್ಚಿನ ಸಂಖ್ಯೆಯಲ್ಲಿ ಸೂಕ್ಷ್ಮ ಪ್ರಕರಣಗಳನ್ನು ಭೇದಿಸಿರುತ್ತಾರೆ. ಉಪ್ಪಾರ ಪೇಟೆ ಠಾಣಾ ವ್ಯಾಪ್ತಿಯಲ್ಲಿ ರೂ.30 ಲಕ್ಷ ಬೆಲೆ ಬಾಳುವ ಆನೆ ದಂತವನ್ನು, ರೂ. 15 ಲಕ್ಷ ಮೌಲ್ಯದ ಹುಲಿ ಚರ್ಮವನ್ನು, ರೂ.20 ಲಕ್ಷ ಮೌಲ್ಯದ ಚಿರತೆಯ ಚರ್ಮವನ್ನು ಹಾಗೂ ರೂ. 80 ಲಕ್ಷ ಮೌಲ್ಯದ ಬ್ರೌನ್ ಶುಗರನ್ನು ಹಾಗೂ ಅಕ್ರಮವಾಗಿ ಇಟ್ಟುಕೊಂಡಿದ್ದ ಎರಡು ರಿವಾಲ್ವರ್‌ಗಳನ್ನು ವಶಪಡಿಸಿಕೊಂಡು ಆರೋಪಿಗಳನ್ನು ಸೆರೆಹಿಡಿದಿರುತ್ತಾರೆ. ಹೆಬ್ಬಗೋಡಿ ಠಾಣಾ ವ್ಯಾಪ್ತಿಯಲ್ಲಿ ರೂ. 13 ಲಕ್ಷ ಮೌಲ್ಯದ ಚಿನ್ನದ ಆಭರಣಗಳು ಮತ್ತು ನಗದು ವಶಪಡಿಸಿಕೊಂಡಿರುತ್ತಾರೆ. ಮತ್ತೊಂದು ಪ್ರಕರಣದಲ್ಲಿ ಆರೋಪಿಗಳಿಂದ ರೂ. 1 ಕೋಟಿ 50 ಲಕ್ಷ ಮೌಲ್ಯದ ವಜ್ರ ಮತ್ತು ಚಿನ್ನದ ಆಭರಣಗಳನ್ನು ವಶಪಡಿಸಿಕೊಂಡಿರುತ್ತಾರೆ. 2017 ನೇ ಸಾಲಿನಲ್ಲಿ 6 ಪ್ರಕರಣಗಳಲ್ಲಿ ರೂ. 7.97 ಕೋಟಿ ಮೊತ್ತದ ಡಿಮಾನಿಟೈಸ್ಡ್ ಕರೆನ್ಸಿಗಳನ್ನು ವಶಪಡಿಸಿಕೊಂಡಿರುತ್ತಾರೆ. ಎಟಿಎಂ ಲೂಟಿ ಮಾಡಿದ್ದ ಆರೋಪಿಗಳನ್ನು ಸೆರೆಹಿಡಿದು ಅವರಿಂದ ರೂ. 40 ಲಕ್ಷ ಹಣವನ್ನು ವಶಪಡಿಸಿಕೊಂಡಿರುತ್ತಾರೆ. ಯಾವುದೆ ಸುಳಿವಿಲ್ಲದ ಮಗುವಿನ ಅಪಹರಣ ಮತ್ತು ಕೊಲೆ ಪ್ರಕರಣದ ತನಿಖೆ ಕೈಗೊಂಡು ಆರೋಪಿಗಳನ್ನು ಪತ್ತೆ ಮಾಡಿರುತ್ತಾರೆ. ಇವರು ತಮ್ಮ ಸೇವಾ ಅವಧಿಯಲ್ಲಿ ಅನೇಕ ಕೊಲೆ, ದರೋಡೆ, ಡಕಾಯಿತಿ ಪ್ರಕರಣಗಳನ್ನು ಭೇದಿಸಿದ್ದು, ಇವರ ನಿರ್ವಹಿಸಿರುವ ಸೇವೆಯು ಹಿರಿಯರು ಮೆಚ್ಚುವಂತಹದಾಗಿರುತ್ತದೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಐಯಣ್ಣ ರೆಡ್ಡಿ**

ಪಿಐ,
ರಾಜಗೋಪಾಲನಗರ ಪೊಲೀಸ್ ಠಾಣೆ,
ಬೆಂಗಳೂರು ನಗರ

ಇವರು 1999ರ ಬ್ಯಾಚ್‌ನ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಆಗಿ ನೇಮಕಾತಿ ಹೊಂದಿರುತ್ತಾರೆ. ತರಬೇತಿಯ ನಂತರ ಯಾದಗಿರಿ ಪೊಲೀಸ್ ಠಾಣೆ ಸರಹದ್ದಿನಲ್ಲಿ ನಡೆದ ನಿಗೂಢ ಅಪಹರಣ ಪ್ರಕರಣವನ್ನು ತ್ವರಿತವಾಗಿ ತನಿಖೆ ನಡೆಸಿ ಅಪರಾಧಿಯನ್ನು ಬಂಧಿಸಿರುತ್ತಾರೆ. ಇವರು ಅನೇಕ ಕೊಲೆ, ಅತ್ಯಾಚಾರ, ಸರಗಳ್ಳತನ, ಶ್ರೀಗಂಧದ ಮರಗಳ ಅಕ್ರಮ ಸಾಗಾಣಿಕೆ, ಅಕ್ರಮ ಸಾರಾಯಿ ಮಾರಾಟ, ಮುಂತಾದ ಪ್ರಕರಣಗಳನ್ನು ಭೇದಿಸಿ ಸುಮಾರು ರೂ. 20,00,000/-ಗಳನ್ನು ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಂಡಿರುತ್ತಾರೆ. 2008ನೇ ಸಾಲಿನಲ್ಲಿ ಕುಖ್ಯಾತ ಸರಗಳ್ಳರ ಗ್ಯಾಂಗ್ ಅನ್ನು ಬಂಧಿಸಿ ಚಿನ್ನಾಭರಣಗಳನ್ನು ವಶಪಡಿಸಿಕೊಂಡು ಅಪರಾಧಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆ ಆಗುವಂತೆ ಉತ್ತಮವಾದ ಕಾರ್ಯವನ್ನು ನಿರ್ವಹಿಸಿರುತ್ತಾರೆ. ಇವರಿಗೆ 2011ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಚಿನ್ನದ ಪದಕವನ್ನು ನೀಡಿ ಗೌರವಿಸಲಾಗಿದೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಎಂ.ವಿ. ಶೇಷಾದ್ರಿ**
ಪಿಐ,
ಸಿಇಎನ್ ಪೊಲೀಸ್ ಠಾಣೆ,
ತುಮಕೂರು

ಇವರು 1983ರ ಬ್ಯಾಚ್‌ನ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಆಗಿ ನೇಮಕಾತಿ ಹೊಂದಿರುತ್ತಾರೆ. ನಂತರ 2001ರಲ್ಲಿ ಪಿ.ಎಸ್.ಐ ಆಗಿ ನೇಮಕಗೊಂಡು ತರಬೇತಿ ತರುವಾಯ ಆನೆ ದಂತ ಚೋರ ಪ್ರಮುಖ ಆರೋಪಿಯನ್ನು ಬಂಧಿಸಿರುತ್ತಾರೆ. ಇವರು ಅನೇಕ ಕೊಲೆ, ಅತ್ಯಾಚಾರ, ಸರಗಳ್ಳತನ, ಶ್ರೀಗಂಧದ ಮರಗಳ ಅಕ್ರಮ ಸಾಗಾಣಿಕೆ, ಅಕ್ರಮ ಸಾರಾಯಿ ಮಾರಾಟ ಮತ್ತು ಮುಂತಾದ ಪ್ರಕರಣಗಳನ್ನು ಭೇದಿಸಿ ಅಪರಾಧಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಶಿಕ್ಷೆ ಆಗುವಂತೆ ಕಾರ್ಯ ನಿರ್ವಹಿಸಿರುತ್ತಾರೆ. 2011ರಲ್ಲಿ ಪಾವಗಡದಲ್ಲಿ ನಡೆದ ಮುತ್ತೂಟ್ ಗೋಲ್ಡ್ ಲೋನ್ ಫೈನಾನ್ಸ್‌ನ ದರೋಡೆ ಪ್ರಕರಣವನ್ನು ಅತ್ಯಂತ ತ್ವರಿತಗತಿಯಲ್ಲಿ ತನಿಖೆ ನಡೆಸಿ, ಅಪರಾಧಿಗಳನ್ನು ಬಂಧಿಸಿ ಸುಮಾರು ರೂ. 3.25 ಕೋಟಿಗಳನ್ನು ಬೆಲೆ ಬಾಳುವ ಚಿನ್ನಾಭರಣ, ನಗದು ಹಣವನ್ನು ವಶಪಡಿಸಿಕೊಂಡಿರುತ್ತಾರೆ. ಇವರ ಕಾರ್ಯತತ್ಪರತೆಗೆ ಹಿರಿಯ ಪೊಲೀಸ್ ಅಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಿರುತ್ತಾರೆ. ಇವರಿಗೆ ಕರ್ನಾಟಕ ಸರ್ಕಾರವು 2012ರಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳ ಪದಕವನ್ನು ನೀಡಿ ಗೌರವಿಸಲಾಗಿದೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಹೆಚ್.ಡಿ. ಕುಲಕರ್ಣಿ**

ಪಿಐ, ವಿಕಾಸಸೌಧ ಭದ್ರತೆ,
ಬೆಂಗಳೂರು

ಇವರು 1999ರ ಬ್ಯಾಚ್‌ನ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಆಗಿ ನೇಮಕಾತಿ ಹೊಂದಿರುತ್ತಾರೆ. ನಂತರ ಇವರು ಅನೇಕ ಕೊಲೆ, ಅತ್ಯಾಚಾರ, ಸರಗಳ್ಳತನ, ಶ್ರೀಗಂಧದ ಮರಗಳ ಅಕ್ರಮ ಸಾಗಾಣಿಕೆ, ಅಕ್ರಮ ಸಾರಾಯಿ ಮಾರಾಟ ಮತ್ತು ಮುಂತಾದ ಪ್ರಕರಣಗಳನ್ನು ಭೇದಿಸಿ ಅಪರಾಧಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಶಿಕ್ಷೆ ಆಗುವಂತೆ ಕಾರ್ಯ ನಿರ್ವಹಿಸಿರುತ್ತಾರೆ. ಸಂವೇದನಾಶೀಲ ಕೊಲೆ ಪ್ರಕರಣವಾದ ಪತ್ರಕರ್ತೆ ಗೌರಿ ಲಂಕೇಶ್ ರವರ ಕೊಲೆ ಪ್ರಕರಣದ ಕುರಿತು ತ್ವರಿತವಾಗಿ ತನಿಖೆಯನ್ನು ನಡೆಸಿ ವರದಿಯನ್ನು ನೀಡಿರುತ್ತಾರೆ ಮತ್ತು ಚಿಕ್ಕಮಗಳೂರಿನಲ್ಲಿ ನಡೆದ ಬಾಬಾಬುಡನಗಿರಿ ದತ್ತಜಯಂತಿ ಇಲ್ಲಿ ನಡೆದ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡುವಲ್ಲಿ ಶ್ರಮವಹಿಸಿರುತ್ತಾರೆ. ಇವರ ಕಾರ್ಯತತ್ಪರತೆಗೆ ಹಿರಿಯ ಪೊಲೀಸ್ ಅಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಡಾ|| ಬಿ.ಎಸ್. ಸುಧಾಕರ್**

ಸಿಪಿಐ,
ಕಂಟೋನ್‌ಮೆಂಟ್ ರೈಲ್ವೆ ವೃತ್ತ,
ಬೆಂಗಳೂರು

ಇವರು 1999ರ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಆಗಿ ನೇಮಕಾತಿ ಹೊಂದಿರುತ್ತಾರೆ. ಹೊಸಪೇಟೆ ತಾಲ್ಲೂಕು ಪಂಚಾಯಿತಿ ಪ್ರಸಿಡೆಂಟ್ ಸೂರ್ಯನಾರಾಯಣನನ್ನು ಶೂಟೌಟ್ ಮಾಡಿ ಕೊಲೆ ಮಾಡಲಾದ ದುಷ್ಕರ್ಮಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿರುತ್ತಾರೆ ಹಾಗೂ ಅಂತರ್ ರಾಜ್ಯ ದರೋಡೆಕೋರರ ಗ್ಯಾಂಗ್ ಅನ್ನು ಬಂಧಿಸಿ ಸುಮಾರು 4 ಲಕ್ಷ ರೂ.ಗಳ ಚಿನ್ನಾಭರಣವನ್ನು ವಶಪಡಿಸಿಕೊಂಡಿರುತ್ತಾರೆ. ದೇವಸ್ಥಾನಗಳಲ್ಲಿ ದೇವರ ವಿಗ್ರಹಗಳನ್ನು ಕಳ್ಳತನ ಮಾಡುತ್ತಿದ್ದ ದರೋಡೆಕೋರರ ಬಂಧಿಸಿ ರೂ.3 ಕೋಟಿ ಬೆಲೆ ಬಾಳುವ ದೇವರ ವಿಗ್ರಹಗಳನ್ನು ವಶಪಡಿಸಿಕೊಂಡಿರುತ್ತಾರೆ ಇವರ ಈ ಕಾರ್ಯಕ್ಷಮತೆಗೆ ಪೊಲೀಸ್ ಅಧಿಕಾರಿಗಳು ಮತ್ತು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಇವರು ಅನೇಕ ಕೊಲೆ, ಅತ್ಯಾಚಾರ, ಸರಗಳ್ಳತನ, ರಕ್ತ ಚಂದನ ಮರಗಳ ಅಕ್ರಮ ಸಾಗಾಣಿಕೆ, ಅಕ್ರಮ ಸಾರಾಯಿ ಮಾರಾಟ ಮತ್ತು ಕೋಟಾ ನೋಟು ಚಲಾವಣೆ ಪ್ರಕರಣಗಳನ್ನು ಭೇದಿಸಿ ಸುಮಾರು 15 ಕೋಟಿ ರೂ.ಗಳ ಬೆಲೆ ಬಾಳುವ ವಸ್ತುಗಳನ್ನು ವಶಪಡಿಸಿಕೊಂಡು ಅಪರಾಧಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಶಿಕ್ಷೆ ಆಗುವಂತೆ ಕಾರ್ಯ ನಿರ್ವಹಿಸಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ವೈ ಅಮರನಾರಾಯಣ**
ಪಿಐ, ರಾಜ್ಯಗುಪ್ತವಾರ್ತೆ,
ಬೆಂಗಳೂರು

ಇವರು 1986ರಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ನೇಮಕ ಹೊಂದಿ, ತದನಂತರ 2001ರಲ್ಲಿ ಪೊಲೀಸ್ ಸಬ್-ಇನ್ಸ್‌ಪೆಕ್ಟರ್ ಆಗಿ ನೇಮಕಾತಿ ಹೊಂದಿರುತ್ತಾರೆ. ಇವರು ಅನೇಕ ಕೊಲೆ, ಅತ್ಯಾಚಾರ, ಸರಗಳ್ಳತನ, ಅಕ್ರಮ ಗೋ ಸಾಗಾಣಿಕೆ, ಅಕ್ರಮ ಸಾರಾಯಿ ಮಾರಾಟ ಮತ್ತು ಕೋಟಾ ನೋಟು ಚಲಾವಣೆ ಪ್ರಕರಣಗಳನ್ನು ಭೇದಿಸಿ ಅಪರಾಧಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಶಿಕ್ಷೆ ಆಗುವಂತೆ ಕಾರ್ಯ ನಿರ್ವಹಿಸಿರುತ್ತಾರೆ ಹಾಗೂ 2018ನೇ ಸಾಲಿನಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆ ಮಂಚೇನಹಳ್ಳಿನಲ್ಲಿ ನಡೆದ ನಿಗೂಢ ಕೊಲೆ ಪ್ರಕರಣವನ್ನು ವಿಶೇಷ ತನಿಖಾ ತಂಡದೊಂದಿಗೆ ತನಿಖೆಯನ್ನು ಕೈಗೊಂಡು ಅಪರಾಧಿಗಳನ್ನು ಬಂಧಿಸಿ ನ್ಯಾಯಾಲಯದಲ್ಲಿ ಶಿಕ್ಷೆಗೊಳಪಡಿಸಿರುತ್ತಾರೆ. ಇವರ ಕಾರ್ಯಕ್ಷಮತೆಗೆ ಹಿರಿಯ ಪೊಲೀಸ್ ಅಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ರಾಜುಗೋಪಾಲ್ ಆರ್**

ಸ್ಪೆಷಲ್ ಎಆರ್ಎಸ್ಐ,
3ನೇ ಪಡೆ, ಕೆಎಸ್ಆರ್ಪಿ, ಬೆಂಗಳೂರು

ಇವರು 1984ನೇ ಸಾಲಿನಲ್ಲಿ ಪೊಲೀಸ್ ಇಲಾಖೆಯಲ್ಲಿ ಕಾನ್ಸ್‌ಟೇಬಲ್ ಆಗಿ ನೇಮಕಾತಿ ಹೊಂದಿದ್ದು ಹಲವಾರು ಬ್ಯಾಚ್‌ಗಳ ಹೊಸದಾಗಿ ನೇಮಕಗೊಂಡ ಕೆಎಸ್ಆರ್‌ಪಿ ಪೊಲೀಸ್ ಕಾನ್ಸ್‌ಟೇಬಲ್‌ಗಳಿಗೆ ಮೂಲಭೂತ ತರಬೇತಿಯನ್ನು ನೀಡಿದ್ದಾರೆ. ಇದರಲ್ಲಿ ರಿಫ್ರೆಶರ್ಸ್ ಕೋರ್ಸ್‌ಗಳು(ಟಿಓಟಿ), ರೈಲ್ವೆ ಪೊಲೀಸ್ ಕಾನ್ಸ್‌ಟೇಬಲ್‌ನ ಮೂಲ ಕೋರ್ಸ್‌ಗಳು ಸೇರಿವೆ. ಹಿರಿಯ ಅಧಿಕಾರಿಗಳು ಅವರ ತರಬೇತಿ ಸಾಮರ್ಥ್ಯ ಮತ್ತು ಅವರ ಅತ್ಯುತ್ತಮ ಪ್ರಯತ್ನಗಳ ಬಗ್ಗೆ ಬಹಳ ಮೆಚ್ಚುಗೆ ವ್ಯಕ್ತ ಪಡಿಸಿದರು. ಇವರು ನಗದು ಪುರಸ್ಕಾರವನ್ನೂ ಪಡೆದಿರುತ್ತಾರೆ. ಇವರು ಹೆಡ್ ಕಾನ್ಸ್‌ಟೇಬಲ್ ಆಗಿ ಬಡ್ತಿ ಪಡೆದ ನಂತರ 10ನೇ ಪಡೆ, ಶಿಗ್ಗಾಂವಿಗೆ ವರ್ಗಾವಣೆಗೊಂಡ ನಂತರ, ಇಲ್ಲಿ ಶಸ್ತ್ರಾಸ್ತ್ರ ನಿರ್ವಹಣೆ ಮತ್ತು ಭೋಧನಾ ಕೌಶಲ್ಯಗಳ ಬಗ್ಗೆ ಅವರ ತರಬೇತಿ ಸಾಮರ್ಥ್ಯ ಮತ್ತು ಜ್ಞಾನವನ್ನು ಪರಿಗಣಿಸಿ ಅವರನ್ನು ಯಲಹಂಕಾದ ಎಪಿಟಿಎಸ್ ಪೊಲೀಸ್ ತರಬೇತಿ ಶಾಲೆಗೆ ವರ್ಗಾವಣೆಗೊಳಿಸಲಾಯಿತು. ತರಬೇತುದಾರರಾಗಿ ಅವರು ಯಲಹಂಕದಲ್ಲಿ ಸಿಎಆರ್, ಡಿಎಆರ್, ಸಿವಿಲ್ ಪೊಲೀಸ್, ಬಂಡೀಪುರ ಫಾರೆಸ್ಟ್ ಗಾರ್ಡ್‌ಗಳಿಗೆ ಟೈಗರ್ ಪ್ರೊಟೆಕ್ಷನ್ ಫೋರ್ಸ್, ಕೆಎಸ್ಆರ್‌ಟಿಸಿ ಸೆಕ್ಯೂರಿಟಿ ಗಾರ್ಡ್, ಬಿಎಂಟಿಸಿ ಸೆಕ್ಯೂರಿಟಿ ಗಾರ್ಡ್, ಬಿಎಂಟಿಸಿ ಸೆಕ್ಯೂರಿಟಿ ಗಾರ್ಡ್ ಮತ್ತು ಕೆಎಸ್ಐಎಸ್ಎಫ್‌ಗೆ ಮೂಲಭೂತ ತರಬೇತಿ, ಟಿಓಟಿ ತರಬೇತಿ ನೀಡಿದ್ದರು. ಅವರು ಪ್ರಾಮಾಣಿಕ, ಸಮಯಪ್ರಜ್ಞೆ ಮತ್ತು ಬಹಳ ಶಿಸ್ತುಬದ್ಧ ಉತ್ತಮ ಕಾರ್ಯಕ್ಕಾಗಿ ಅವರನ್ನು ಮೇಲಾಧಿಕಾರಿಗಳು ನಗದು ಪುರಸ್ಕಾರಗಳೊಂದಿಗೆ ಪ್ರಶಂಸಿಸಿದ್ದಾರೆ

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಬಿ.ಎಸ್. ಸುದೇಶ್ ಕಿಣಿ**

ಎಆರ್‌ಎಸ್‌ಐ, ಡಿಎಆರ್,
ಚಿಕ್ಕಮಗಳೂರು ಜಿಲ್ಲೆ

ಇವರು 1996ನೇ ಸಾಲಿನಲ್ಲಿ ಪೊಲೀಸ್ ಇಲಾಖೆಯಲ್ಲಿ ಸಹಾಯಕ ರಿಸರ್ವ್ ಸಬ್ ಇನ್ಸ್‌ಪೆಕ್ಟರ್ ಆಗಿ ನೇಮಕಾತಿ ಹೊಂದಿದ್ದು, ಚಿಕ್ಕಮಗಳೂರು ಜಿಲ್ಲೆಯ ಗೌಪ್ಯ ಶಾಖೆಯಲ್ಲಿ ಆರು ವರ್ಷಗಳ ಕರ್ತವ್ಯ ನಿರ್ವಹಿಸಿರುತ್ತಾರೆ. 1998 ರಲ್ಲಿ ದತ್ತ ಜಯಂತಿ ಮತ್ತು ದತ್ತ ಮಾಲಾ ಅಭಿಯಾನದ ಅವಧಿಯಲ್ಲಿ ದೊಡ್ಡ ಪ್ರಮಾಣದ ಬಂದೋಬಸ್ತ್ ಯೋಜನೆ ಮತ್ತು ಅನುಷ್ಠಾನದಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದಾರೆ. ಈ ಸಮಯದಲ್ಲಿ ಆಹಾರ, ನಿಲುಗಡೆ ಮತ್ತು ಇತರ ಲಾಜಿಸ್ಟಿಕ್ಸ್‌ನ ವ್ಯವಸ್ಥೆಗಳನ್ನು ನೋಡಿಕೊಂಡಿರುವುದು. ಸರಿಯಾದ ವ್ಯಕ್ತಿಯನ್ನು ಸರಿಯಾದ ಕೆಲಸಕ್ಕೆ ನಿಯೋಜಿಸುವ ಮೂಲಕ, ಪರಿಣಾಮಕಾರಿ ಪೊಲೀಸ್ ಬಂದೋಬಸ್ತ್‌ನ್ನು ಖಾತ್ರಿಪಡಿಸಲಾಗುತ್ತದೆ. ಅವರು ಇತರ ಇಲಾಖೆಗಳು ಮತ್ತು 50 ಕ್ಕೂ ಹೆಚ್ಚು ಸಂಖ್ಯೆಯ ವಸತಿಗೃಹಗಳು/ ನಿಲುಗಡೆ ಸ್ಥಳಗಳು/ ಸಮುದಾಯ ಕೇಂದ್ರಗಳನ್ನು ವೈಯಕ್ತಿಕವಾಗಿ ಸಂಘಟಿಸಿದರು ಮತ್ತು ಎಲ್ಲಾ ರೀತಿಯ ವ್ಯವಸ್ಥೆಗಳು/ ಲಾಜಿಸ್ಟಿಕ್ಸ್‌ನ್ನು ಯಾವುದೇ ದೋಷವಿಲ್ಲದೆ ಮಾಡಲಾಗಿದೆಯೆ ಎಂದು ಖಚಿತಪಡಿಸಿಕೊಳ್ಳಲು ಅವರು ಸಹಕರಿಸುತ್ತಾರೆ. ಒಳಾಂಗಣ ಕಛೇರಿ ಕೆಲಸಗಳ ಜೊತೆಗೆ ಚಿಕ್ಕಮಗಳೂರಿನ ಡಿಎಆರ್, ತಾತ್ಕಾಲಿಕ ಪೊಲೀಸ್ ತರಬೇತಿ ಶಾಲೆಯಲ್ಲಿ ಪೊಲೀಸ್ ತರಬೇತುದಾರರಿಗೆ ಹೊರಾಂಗಣ ತರಬೇತಿಯನ್ನು ನೀಡಿದ್ದಾರೆ. ಒಟ್ಟು 600 ಸಂಖ್ಯೆಯ 9 ಬ್ಯಾಚ್‌ಗಳಿಗೆ ಅವರು ತರಬೇತಿ ನೀಡಿದ್ದಾರೆ. ಅವರ ನೇತೃತ್ವದಲ್ಲಿ ಕಠಿಣ ತರಬೇತಿ ಪಡೆದ ನೇಮಕಾತಿಗಳು ಉನ್ನತ ಮಟ್ಟದ ತರಬೇತಿ ಮಾನದಂಡಗಳನ್ನು ಪ್ರದರ್ಶಿಸುವ ಮೂಲಕ ಒಂದು ಉದಾಹರಣೆಯನ್ನು ನೀಡಿದ್ದರು. ಪೊಲೀಸಿಂಗ್ ವೃತ್ತಿಯನ್ನು ಸ್ವಯಂಪ್ರೇರಣೆಯಿಂದ ಕೈಗೆತ್ತಿಕೊಂಡ ಮತ್ತು ಅವರ ಸಮರ್ಪಿತ ಮತ್ತು ನಿರಂತರ ಕಠಿಣ ಪರಿಶ್ರಮದಿಂದಾಗಿ ಯಶಸ್ಸನ್ನು ಸಾಧಿಸಿದ್ದಾರೆ. ಇವರು ಉತ್ತಮ ಕಾರ್ಯಕ್ಕಾಗಿ ಅವರನ್ನು ಮೇಲಾಧಿಕಾರಿಗಳು ನಗದು ಪುರಸ್ಕಾರಗಳೊಂದಿಗೆ ಪ್ರಶಂಸಿಸಿದ್ದಾರೆ

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಆರ್.ಎಸ್. ಸಿದ್ದಪ್ಪ**

ಎಎಸ್ಐ, ಕ್ಯಾತಸಂದ್ರ ಪೊಲೀಸ್ ಠಾಣೆ,
ತುಮಕೂರು

ಇವರು 1993 ರಲ್ಲಿ ನಾಗರೀಕ ಪೊಲೀಸ್ ಪೇದೆಯಾಗಿ ಪೊಲೀಸ್ ಇಲಾಖೆಗೆ ನೇಮಕಾತಿ ಹೊಂದಿರುತ್ತಾರೆ. ಇವರು 1994 ರಿಂದ 2018 ರವರೆಗೆ ಮಿಡಿಗೇಶಿ, ಕ್ಯಾತಸಂದ್ರ, ದಂಡಿನಶಿವಾರ, ಹೆಬ್ಬೂರು, ತಿಲಕ್ ಪಾರ್ಕ್ ಮತ್ತು ಶಿರಾ ಪೊಲೀಸ್ ಠಾಣೆಗಳನ್ನು ಕರ್ತವ್ಯ ನಿರ್ವಹಿಸಿರುತ್ತಾರೆ. ಇವರು ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಸಿಪಿಸಿ ಸಹಾಯಕ ತನಿಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ 12 ಕೊಲೆ ಪ್ರಕರಣ ಮತ್ತು 2 ಅತ್ಯಾಚಾರ ಪ್ರಕರಣಗಳಲ್ಲಿ ಆರೋಪಿಗಳಿಗೆ ನ್ಯಾಯಾಲಯದಲ್ಲಿ ಶಿಕ್ಷೆಯಾಗಲು ಇವರ ಪಾತ್ರ ಪ್ರಮುಖವಾಗಿರುತ್ತದೆ. ಇವರು ಮುಖ್ಯ ಪೇದೆಯಾಗಿ ಕ್ಯಾತಸಂದ್ರ ಪೊಲೀಸ್ ಠಾಣೆಯಲ್ಲಿ ಸಹಾಯಕ ತನಿಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಇವರ ವ್ಯಾಪ್ತಿಯಲ್ಲಿ ನಡೆದು ಎರಡು ಕೊಲೆ ಪ್ರಕರಣದಲ್ಲಿ ಇವರು ಸೂಕ್ತ ಸಮಯದಲ್ಲಿ, ಸರಿಯಾದ ಸಾಕ್ಷಿ ಆಧಾರ ಮತ್ತು ದಾಖಲೆಗಳನ್ನು ಕಲೆಹಾಕಿ ಆರೋಪಿಯನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸುವಲ್ಲಿ ಇವರ ಪಾತ್ರ ಬಹಳ ಪ್ರಮುಖವಾಗಿದ್ದು, ಈ ಪ್ರಕರಣದಲ್ಲಿ ಆರೋಪಿಗೆ ಜೀವಾವಧಿ ಶಿಕ್ಷೆಯಾಗಲು ಇವರ ಪಾತ್ರ ಪ್ರಶಂಸನೀಯವಾಗಿರುತ್ತದೆ. ಇವರು ಸಿದ್ಧಗಂಗಾ ಮಠ, ತುಮಕೂರು ವ್ಯಾಪ್ತಿಯಲ್ಲಿ ಶ್ರೀ ಎ.ಪಿ.ಜೆ. ಅಬ್ದುಲ್ ಕಲಂ, ಮಾನ್ಯ ಮಾಜಿ ರಾಷ್ಟ್ರಪತಿಗಳು, ಶ್ರೀ ಎಲ್.ಕೆ. ಅಡ್ವಾನಿ, ಮಾನ್ಯ ಉಪ ಪ್ರಧಾನಿಗಳು ಹಾಗೂ ಶ್ರೀಮತಿ ಸೋನಿಯಾ ಗಾಂಧಿ, ಕಾಂಗ್ರೆಸ್ ರಾಷ್ಟ್ರೀಯ ಅಧ್ಯಕ್ಷರು ಇನ್ನಿತರ ಅತಿ ಗಣ್ಯ ಮತ್ತು ಗಣ್ಯ ವ್ಯಕ್ತಿಗಳು ಬೇಟಿ ನೀಡಿದಾಗ ಸಿದ್ಧಗಂಗಾ ಮಠಕ್ಕೆ ಶ್ರೀ ಶ್ರೀ ಶಿವಕುಮಾರ್ ಸ್ವಾಮಿಜಿ ರವರ ಹುಟ್ಟಿದ ದಿನದಂದು ಅತ್ಯುತ್ತಮವಾಗಿ ಬಂದೋಬಸ್ತ್ ಕೆಲಸವನ್ನು ಬಹಳ ಅಚ್ಚುಕಟ್ಟಾಗಿ ನಿರ್ವಹಿಸಿರುವುದು ಮೇಲಾಧಿಕಾರಿಗಳ ಪ್ರಸಂಶೆಗೆ ಪಾತ್ರರಾಗಿರುತ್ತಾರೆ. ಇವರು ಸುಮಾರು 25 ಕೊಲೆ ಪ್ರಕರಣಗಳು, 15 ದರೋಡೆ, 35 ಸುಲಿಗೆ ಪ್ರಕರಣ ಸಯಾಯಕ ತನಿಖಾಧಿಕಾರಿಯಾಗಿ, ತನಿಖಾಧಿಕಾರಿಗಳಿಗೆ ಸೂಕ್ತ ಸಲಹೆ ಹಾಗೂ ಪ್ರಕರಣಕ್ಕೆ ಸಂಬಂಧಿಸಿದ ಸಾಕ್ಷಾಧಾರಗಳನ್ನು ಸೂಕ್ತ ಕಾಲದಲ್ಲಿ ದಾಖಲೆಗಳನ್ನು  ಕಲೆಹಾಕಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಬಹುತೇಕ ಪ್ರಕರಣಗಳು ನ್ಯಾಯಾಲಯದಲ್ಲಿ ಸಾಬೀತಾಗಿ ಅಪರಾಧಿಗಳಿಗೆ ಶಿಕ್ಷೆ ವಿಧಿಸುವಲ್ಲಿ ಇವರ ಕರ್ತವ್ಯ ಪ್ರಜ್ಞೆ ಬಹಳ ಮುಖ್ಯವಾಗಿರುತ್ತದೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಎನ್.ಆರ್. ಕಾಟೆ**

ಪಿಎಸ್ಐ, ಡಿಎಸ್‌ಬಿ,
ಹಾವೇರಿ ಜಿಲ

ಇವರು 1990 ರಲ್ಲಿ ನಾಗರೀಕ ಪೊಲೀಸ್ ಪೇದೆಯಾಗಿ ಇಲಾಖೆಗೆ ನೇಮಕಗೊಂಡಿರುತ್ತಾರೆ. ಇವರು ಸವಣೂರು, ಕುಮಾರಪಟ್ಟಣಂ, ರಾಣಿಬೆನ್ನೂರು ನಗರ, ಗುತ್ತಲ್ ಪೊಲೀಸ್ ಠಾಣೆ ಮತ್ತು ಜಿಲ್ಲೆಯ ವಿಶೇಷ ಘಟಕಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಇವರು ಹಾವೇರಿ ಜಿಲ್ಲೆಯಲ್ಲಿ ಸಹಾಯಕ ತನಿಖಾಧಿಕಾರಿಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಬಹಳಷ್ಟು ಕೊಲೆ ಪ್ರಕರಣ, ದರೋಡೆ, ಕಳ್ಳತನ, ಶಿಶು ಹತ್ಯೆ ಪ್ರಕರಣ ಮತ್ತು ನಕಲಿ ನೋಟು, ಅಪಹರಣ ಹಾಗೂ ಮಾರಣಾಂತಿಕ ಅಪಘಾತಗಳಲ್ಲಿ, ಇವರ ಮಾಹಿತಿ, ಸಾಕ್ಷಾಧಾರಗಳು, ವರದಿಗಳು ತನಿಖೆಯಲ್ಲಿ ಇವರು ತೋರುತ್ತಿದ್ದ ಶ್ರದ್ಧೆಯಿಂದಾಗಿ ನ್ಯಾಯಾಲಯದಲ್ಲಿ ಸುಮಾರು 20 ಹೆಚ್ಚು ಅಪರಾಧ ಪ್ರಕರಣಗಳು ಸಾಬೀತಾಗಿರುತ್ತದೆ. ಶ್ರೀ ಜಾಫರ್ ಖಾನ್ ಪಟ್ಟಾಣ್ ಜಲಾನ, ಮಹಾರಾಷ್ಟ್ರ ಇವರು ಭಾಗಿಯಾಗಿದ್ದ, ಕುಮಾರಪಟ್ಟಣ ಪೊಲೀಸ್ ಠಾಣೆ ಪ್ರಕರಣ ಸಂಖ್ಯೆ: 88/1997 ದಲ್ಲಿ ನ್ಯಾಯಾಲಯವು ಇವರ ಕರ್ತವ್ಯ ಪ್ರಜ್ಞೆಯನ್ನು ಮೆಚ್ಚಿ ಬಹುಮಾನವನ್ನು ಘೋಷಿಸಿರುತ್ತಾರೆ.ರಾಣಿಬೆನ್ನೂರು ಪೊಲೀಸ್ ಠಾಣೆ ಪ್ರಕರಣದಲ್ಲಿ ಕೇರಳ ರಾಜ್ಯಕ್ಕೆ ಹೋಗಿ 05 ಜನ ಅಪರಾಧಿಗಳನ್ನು ವಶಕ್ಕೆ ಪಡೆದು ಸುಮಾರು 8.00 ಕೆ.ಜಿ ಚಿನ್ನವನ್ನು ವಶಕ್ಕೆ ಪಡೆಯಲಾಗಿರುತ್ತದೆ. ಈ ಸಂಬಂಧ ಇಲಾಖೆಯಿಂದ ಇವರಿಗೆ ನಗದು ಬಹುಮಾನವನ್ನು ನೀಡಲಾಗಿರುತ್ತದೆ. ಇವರು 2009 ರ ಲೋಕಸಭಾ, 2010 ರ ಗ್ರಾಮ ಪಂಚಾಯಿತಿ, 2013 ರ ಶಾಸಕಾಂಗ ಚುನಾವಣೆ ಮತ್ತು 2018 ರ ಸ್ಥಳೀಯ ಸಂಸ್ಥೆ ಚುನಾವಣೆ 2019 ರ ಲೋಕಸಭಾ ಚುನಾವಣೆಗಳಲ್ಲಿ ಇವರು ನಿರ್ವಹಿಸಿದ ಬಂದೋಬಸ್ತ್ ಕರ್ತವ್ಯಗಳು ಹಾಗೂ ಹಾವೇರಿಯು ಬಹಳ ಸೂಕ್ಷ್ಮ ಪ್ರದೇಶವಾಗಿದ್ದು, ಗಣೇಶ ಹಬ್ಬದ ಸಂದರ್ಭದಲ್ಲಿ ಕೋಮು ಗಲಬೆಗಳು ಉಂಟಾಗುವ ಸಾಧ್ಯತೆ ಇರುವುದರಿಂದ ಸೂಕ್ಷ್ಮ ಪ್ರದೇಶಗಳನ್ನು ಪಟ್ಟಿಮಾಡಿ ಕಟ್ಟುನಿಟ್ಟಿನ ಬಂದೋಬಸ್ತ್ ಮಾಡಿ ಮೇಲಾಧಿಕಾರಿಗಳ ಮೆಚ್ಚುಗೆ/ಪ್ರಶಂಸೆಗೆ ಪಾತ್ರರಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಆರ್ ಸತೀಶ್**

ಎಎಸ್ಐ,
ಜೋಗ ಪೊಲೀಸ್ ಠಾಣೆ, ಶಿವಮೊಗ್ಗ

ಇವರು 1992 ರಲ್ಲಿ ನಾಗರೀಕ ಪೊಲೀಸ್ ಪೇದೆಯಾಗಿ ಇಲಾಖೆಗೆ ನೇಮಕಗೊಂಡಿರುತ್ತಾರೆ. ಇವರು ಕರ್ನಾಟಕ ಪೊಲೀಸ್ ಇಲಾಖೆಯ ಪರವಾಗಿ ರಾಷ್ಟ್ರೀಯ ಮಟ್ಟದಲ್ಲಿ 2007 ರ ವರೆಗೆ ಪ್ರತಿನಿಧಿಸುತ್ತಾ ಬಂದಿರುತ್ತಾರೆ. ಇವರು ರಾಷ್ಟ್ರೀಯ ಮಟ್ಟದಲ್ಲಿ ಪೊಲೀಸ್ ಇಲಾಖೆಯನ್ನು ಪ್ರತಿನಿಧಿಸುತ್ತಾ ಬಂದಿದ್ದು, 09 ಬಾರಿ ಅಖಿಲ ಭಾರತ ಪೊಲೀಸ್ ಹಾಕಿ ಚಾಂಪಿಯನ್‌ಶಿಪ್‌ನಲ್ಲಿ ಮುಖ್ಯ ಪಾತ್ರ ವಹಿಸಿದ್ದು, 14 ಬಾರಿ ರಾಜ್ಯ ಮಟ್ಟದ ಟ್ರೋಫಿಯನ್ನು, 14 ಬಾರಿ ರನ್ನರ್ ಅಪ್ ಹಾಗೂ 4 ಬಾರಿ ಮೂರನೇ ಸ್ಥಾನದಲ್ಲಿ ಟ್ರೋಫಿಯನ್ನು ಪಡೆಯುವಲ್ಲಿ ಇವರ ಪಾತ್ರ ಮುಖ್ಯವಾಗಿರುತ್ತದೆ. ಇವರು ಕ್ರೀಡಾಪಟುವಾದ್ದರಿಂದ ಶಿವಮೊಗ್ಗ ಜಿಲ್ಲೆಯ ಪರವಾಗಿ ಕರ್ನಾಟಕ ಪೊಲೀಸ್ ಸ್ಪೋರ್ಟ್ಸ್ ಕೂಟದಲ್ಲಿ ಹಲವು ಬಾರಿ ಭಾಗವಹಿಸಿದ್ದು, ಇವರ ಸಾರಥ್ಯದಲ್ಲಿ ಶಿವಮೊಗ್ಗ ಜಿಲ್ಲಾ ಪೊಲೀಸ್ ಕ್ರೀಡಾಕೂಟದಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿರುತ್ತಾರೆ ಇವರನ್ನು ಬೆರಳು ಮುದ್ರೆ ವಿಭಾಗಕ್ಕೆ ನಿಯೋಜಿಲಾಗಿರುತ್ತದೆ. ಅಪರಾಧ ನಡೆದ ಸ್ಥಳಗಳಿಗೆ ಬೇಟಿ ನೀಡಿ, ಸೂಕ್ಷ್ಮವಾಗಿ, ಕೂಲಂಕುಷವಾಗಿ ಪರೀಕ್ಷಿಸಿ ಬಹಳಷ್ಟು ಕಠಿಣ ಪ್ರಕರಣಗಳನ್ನು ಕಂಡು ಹಿಡಿಯುವಲ್ಲಿ ಬಹಳ ಪ್ರಮುಖರು. ಇವರು 2007 ಮತ್ತು 2019 ರಲ್ಲಿ ಸಹಾಯಕ ತನಿಖಾಧಿಕಾರಿಯಾಗಿ ಬೆರಳು ಮುದ್ರೆ ತಜ್ಞರಾಗಿ ಸುಮಾರು 131 ಘೋರ ಪ್ರಕರಣಗಳನ್ನು ಬಗೆಹರಿಸಿ ಸುಮಾರು 3.5 ಕೋಟಿ ಆಸ್ತಿಪಾಸ್ತಿಯನ್ನು ವಶಪಡಿಸಿಕೊಳ್ಳುವಲ್ಲಿ ಇವರ ಪಾತ್ರ ಮುಖ್ಯವಾಗಿರುತ್ತದೆ ಹಾಗೂ Automated Fingerprint Identification System (AFIS) ತಂತ್ರಜ್ಞಾನವನ್ನು ಬಳಸುವಲ್ಲಿ ಪ್ರಮುಖರು ಈ ತಂತ್ರಜ್ಞಾನದಿಂದ ಹಲವಾರು ಪ್ರಕರಣಗಳನ್ನು ಪತ್ತೆಹಚ್ಚುವಲ್ಲಿ ಪ್ರಮುಖ ಪಾತ್ರ ವಹಿಸಿರುತ್ತಾರೆ. ಇವರು ಈ ಸಂಬಂಧ ಪೊಲೀಸ್ ತರಬೇತಿ ಶಾಲೆಯಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ತರಬೇತಿಯನ್ನು ನೀಡುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಡಿ.ಎನ್. ರುದ್ರಸ್ವಾಮಿ**

ಎಎಸ್ಐ, ಸಿಎಸ್‌ಬಿ,
ಬೆಂಗಳೂರು ನಗರ

ಇವರು 1994ನೇ ಸಾಲಿನಲ್ಲಿ ಪೊಲೀಸ್ ಕಾನ್ಸ್‌ಟೇಬಲ್ ಆಗಿ ಪೊಲೀಸ್ ಇಲಾಖೆಗೆ ಸೇರ್ಪಡೆಗೊಂಡಿರುತ್ತಾರೆ. ಸದರಿಯವರು ಬೆಂಗಳೂರು ನಗರದ ಗುಪ್ತವಾರ್ತೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಭಯೋತ್ಪಾದಕ ಚಟುವಟಿಕೆಗಳ ಬಗ್ಗೆ ತನಿಖೆಗಳ ವಿಚಾರಣೆಯಲ್ಲಿ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಬೆಂಗಳೂರು ನಗರದಲ್ಲಿ ಚರ್ಚ್‌ಗಳ ಮೇಲೆ ಸರಣಿ ದಾಳಿಗೆ ಸಂಬಂಧಿಸಿದಂತೆ ಆರೋಪಿಗಳನ್ನು ದಸ್ತಗಿರಿ ಮಾಡುವಲ್ಲಿ ವಿಶೇಷ ತಂಡದಲ್ಲಿ ಉತ್ತಮ ಕರ್ತವ್ಯ ನಿರ್ವಹಿಸಿ ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಿರುತ್ತಾರೆ. ಇವರು ನಗರದಲ್ಲಿ ಮತೀಯ ಮತ್ತು ರೌಡಿ ಚಟುವಟಿಕೆಗಳ ಬಗ್ಗೆ ಮಾಹಿತಿಯನ್ನು ಕಲೆಹಾಕುವಲ್ಲಿ ಉತ್ತಮ ಕಾರ್ಯ ನಿರ್ವಹಿಸಿರುತ್ತಾರೆ. ಸದರಿ ಮಾಹಿತಿಯು ನಗರದಲ್ಲಿ ಹಲವಾರು ಅಹಿತಕರ ಘಟನೆಗಳನ್ನು ತಡೆಯುವಲ್ಲಿ ಉಪಯುಕ್ತವಾಗಿರುತ್ತದೆ. ಇವರು ಪಾಸ್‌ಪೋರ್ಟ್ ವಿಭಾಗದ ಗಣಕೀಕರಣಗೊಳಿಸಿ ಮೇಲ್ದರ್ಜೆಗೇರಿಸಿವ ಕಾರ್ಯದಲ್ಲಿ ಶ್ರಮಿಸಿರುತ್ತಾರೆ. 2006 ರಲ್ಲಿ ನಗರ ಐ.ಐ.ಎಸ್.ಸಿ. ಮೇಲೆ ಭಯೋತ್ಪಾದಕ ದಾಳಿ ನಡೆದ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿಗಳನ್ನು ಬಂಧಿಸಿ ದಸ್ತಗಿರಿ ಮಾಡುವಲ್ಲಿ ಉತ್ತಮ ಕಾರ್ಯ ನಿರ್ವಹಿಸಿರುತ್ತಾರೆ. ಇವರು ಯೋಗ ಪಟುವಾಗಿದ್ದು, ರಾಜ್ಯ, ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಯೋಗ ಸ್ಪರ್ಧೆಯಲ್ಲಿ ಭಾಗವಹಿಸಿ ಹಲವಾರು ಪದಕಗಳನ್ನು ಜಯಿಸಿರುತ್ತಾರೆ. ಇದರಿಂದ, ರಾಜ್ಯ ಮತ್ತು ಪೊಲೀಸ್ ಇಲಾಖೆಗೆ ಹೆಸರು ತಂದಿರುತ್ತಾರೆ. ಇವರು ರಾಜ್ಯ ಪೊಲೀಸ್ ಇಲಾಖೆಯ ಹಲವಾರು ಅಧಿಕಾರಿ ಸಿಬ್ಬಂದಿಗಳಿಗೆ ಯೋಗ ತರಬೇತಿ ನೀಡಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಹೆಚ್.ಸಿ. ರವೀಂದ್ರ**
ಸಿಹೆಚ್‌ಸಿ, ರಾಜ್ಯಗುಪ್ತವಾರ್ತೆ,
ಬೆಂಗಳೂರು

ಇವರು 1997ನೇ ಸಾಲಿನಲ್ಲಿ ಪೊಲೀಸ್ ಕಾನ್ಸ್‌ಟೆಬಲ್ ಆಗಿ ನೇಮಕಗೊಂಡಿದ್ದು ಪ್ರಸ್ತುತ ರಾಜ್ಯ ಗುಪ್ತವಾರ್ತೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಸದರಿ ಘಟಕದ ಆಂತರಿಕ ಆಡಳಿತ ವಿಭಾಗ (ಐ.ಎ.ಡಿ.) ಯಲ್ಲಿ ಉತ್ತಮ ಕೆಲಸ ನಿರ್ವಹಿಸಿದ್ದು, ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಿರುತ್ತಾರೆ. ನಂತರ ವಾಹನ ಸಾರಿಗೆ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸಿದ್ದು, ಸದರಿ ವಿಭಾಗದ ದಾಖಲಾತಿಗಳನ್ನು ನಿರ್ವಹಿಸುವಲ್ಲಿ ಉತ್ತಮ ಕರ್ತವ್ಯ ನಿರ್ವಹಿಸಿರುತ್ತಾರೆ. ಇವರು ಪಶ್ಚಿಮ ಬಂಗಾಳ, ಕೇರಳ, ತಮಿಳುನಾಡು ರಾಜ್ಯಗಳ ಸಾರ್ವತ್ರಿಕ ಚುನಾವಣಾ ಸಮಯದಲ್ಲಿ ಕರ್ತವ್ಯಕ್ಕೆ ನಿಯೋಜನೆಗೊಂಡಿದ್ದು ಅಲ್ಲಿಯೂ ಸಹ ಉತ್ತಮ ಕೆಲಸ ನಿರ್ವಹಿಸಿ ಮೇಲಾಧಿಕಾರಿಗಳ ಪ್ರಶಂಸೆಗೆ ಪಾತ್ರರಾಗಿರುತ್ತಾರೆ. ಎಂ.ಎಂ.ಹಿಲ್ಸ್‌ನಲ್ಲಿ ಕಾಡುಗಳ್ಳ ವೀರಪ್ಪನ್ ಕಾರ್ಯಾಚರಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ರಾಜ್ಯದಲ್ಲಿ ನಡೆದ ಹಲವಾರು ಚುನಾವಣೆಯ ಪೂರ್ವ ಮಾಹಿತಿಯನ್ನು ಕಲೆಹಾಕುವಲ್ಲಿ ಯಶಶ್ವಿಯಾಗಿದ್ದು, ಇದರಿಂದ, ರಾಜಕೀಯ ಪೂರ್ವ ನಿರ್ಧಾರಗಳನ್ನು ತೆಗೆದುಕೊಳ್ಳಲು ಸಹಾಯಕರಾಗಿದ್ದಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






## ಶ್ರೀ ಎನ್. ಮಂಜುನಾಥ ರಾವ್

ಸಿಹೆಚ್‌ಸಿ, ಎಸಿಬಿ,
ಮೈಸೂರು

ಇವರು 1997ನೇ ಸಾಲಿನಲ್ಲಿ ಪೋಲೀಸ್ ಕಾನ್ಸ್‌ಟೇಬಲ್ ಆಗಿ ಇಲಾಖೆಗೆ ನೇಮಕಗೊಂಡಿದ್ದು, ಚಾಮರಾಜನಗರ ಜಿಲ್ಲೆಯ ಮಲೆಮಹದೇಶ್ವರ ಪೋಲೀಸ್ ಠಾಣೆ, ಗುಂಡ್ಲುಪೇಟೆ ಪೋಲೀಸ್ ಠಾಣೆ, ಮೈಸೂರು ಜಿಲ್ಲೆಯ ನಂಜನಗೂಡು ಗ್ರಾಮಾಂತರ ಪೋಲೀಸ್ ಠಾಣೆ, ಡಿ.ಸಿ.ಐ.ಬಿ. ಹಾಗೂ ಮೈಸೂರು ಗ್ರಾಮಾಂತರ ಉಪ ವಿಭಾಗ ಡಿವೈ.ಎಸ್.ಪಿ. ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸಿದ್ದು, ಪ್ರಸ್ತುತ ಎ.ಸಿ.ಬಿ. ಪೋಲೀಸ್ ಠಾಣೆ, ಮೈಸೂರಿನಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತಾರೆ. ಇವರು ಡಿವೈ.ಎಸ್.ಪಿ. ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವಾಗ ಸದರಿ ಕಛೇರಿಯಲ್ಲಿ ದಾಖಲಾಗಿರುವ ಎಸ್.ಸಿ. / ಎಸ್.ಟಿ. ದೌರ್ಜನ್ಯ ಕಾಯ್ದೆಯಡಿಯ ಪ್ರಕರಣಗಳ ತನಿಖೆಯಲ್ಲಿ ತನಿಖಾಧಿಕಾರಿಗಳಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಅಲ್ಲದೇ ಸದರಿ ಕಛೇರಿಗೆ ಬರುವ ಇತರೆ ಪ್ರಕರಣಗಳ ದೋಷಾರೋಪಣಾ ಪಟ್ಟಿ 'ಬಿ' ವರದಿ ಇತರೆ ಕಡತಗಳ ಪರಿಶೀಲನೆಯಲ್ಲಿ ಮೇಲಾಧಿಕಾರಿಗೆ ಸಹಕರಿಸಿರುತ್ತಾರೆ. ಸದರಿಯವರು 2002 ರಲ್ಲಿ ಕಾವೇರಿ ನದಿ ನೀರು ಹಂಚಿಕೆ ವಿಚಾರವಾಗಿ ನಡೆದ ಚಳುವಳಿಯ ಬಂದೋಬಸ್ತ್ ಕರ್ತವ್ಯ ನಕ್ಷೆ ತಯಾರಿಸುವಲ್ಲಿ ಕಾರ್ಯದಲ್ಲಿ ತೊಡಗಿಸಿಕೊಂಡಿರುತ್ತಾರೆ. ಕಾಡುಗಳ್ಳ ವೀರಪ್ಪನ್, ಸಿನಿಮಾ ನಟರಾದ ಡಾ: ರಾಜ್‌ಕುಮಾರ್ ರವರನ್ನು ಅಪಹರಣ ಪ್ರಕರಣಕ್ಕೆ ಸಂಬಂಧಿಸಿದಂತೆ ಉಂಟಾದ ಕಾನೂನು ಸುವ್ಯವಸ್ಥೆ ಪ್ರಕ್ಷುಬ್ಧ ಪರಿಸ್ಥಿಯಲ್ಲಿ ಬಂದೋಬಸ್ತ್ ಯೋಜನೆಯನ್ನು ತಯಾರಿಸುವಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. ಅಲ್ಲದೇ ಮಂಡಕಳ್ಳಿ ವಿಮಾನ ನಿಲ್ದಾಣ ಸರಹದ್ದು ಮೈಸೂರು ಗ್ರಾಮಾಂತರ ವಿಭಾಗದ ವ್ಯಾಪ್ತಿಗೆ ಒಳಪಟ್ಟಿದ್ದು ಅಲ್ಲಿಗೆ ಅಗಮಿಸುವ ಗಣ್ಯಾತಿಗಣ್ಯರ ಭದ್ರತೆ ವ್ಯವಸ್ಥೆಯನ್ನು ಮಾಡುವ ಕಾರ್ಯದಲ್ಲಿ ಸಹಕರಿಸಿರುತ್ತಾರೆ. ಪ್ರಸ್ತುತ ಇವರು ಭ್ರಷ್ಟಾಚಾರ ನಿಗ್ರಹ ದಳ ಪೋಲೀಸ್ ಠಾಣೆ, ಮೈಸೂರಿನಲ್ಲಿ ಹೆಡ್ ಕಾನ್ಸ್‌ಟೇಬಲ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಅಲ್ಲಿಯೂ ಸಹ ಪ್ರಕರಣಗಳ ಪರಿಶೀಲನೆ, ದೋಷಾರೋಪಣಾ ಪಟ್ಟಿ ಹಾಗೂ ಅಂತಿಮ ವರದಿಗಳನ್ನು ಸಿದ್ಧಪಡಿಸಲು ತನಿಖಾಧಿಕಾರಿಗಳಿಗೆ ಸಹಕರಿಸಿರುತ್ತಾರೆ. ಇವರಿಗೆ 2017ನೇ ಸಾಲಿನಲ್ಲಿ ಮಾನ್ಯ ಮುಖ್ಯಮಂತ್ರಿಗಳ ಪೋಲೀಸ್ ಪದಕ ದೊರಕಿರುತ್ತದೆ. ಅಲ್ಲದೇ ಹಲವಾರು ಸಂಘನೆಗಳ ಪುರಸ್ಕಾರಗಳಿಗೆ ಭಾಜನರಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೋಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






## ಶ್ರೀ ಅಶೋಕ್ ಎಸ್. ನಾಯಕ್

ಎಆರ್‌ಎಸ್‌ಐ,
9ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು

ಇವರು 1993ನೇ ಸಾಲಿನಲ್ಲಿ ಮೀಸಲು ಪೊಲೀಸ್ ಪೇದೆಯಾಗಿ ನೇಮಕಾತಿ ಹೊಂದಿ, 8ನೇ ಪಡೆ, ಕೆ.ಎಸ್.ಆರ್.ಪಿ. ಶಿಗ್ಗಾವಿಯಲ್ಲಿ ಮೂಲ ತರಬೇತಿಯ ಅವಧಿಯಲ್ಲಿ ಒಳಾಂಗಣ ಮತ್ತು ಹೊರಾಂಗಣ ತರಬೇತಿಯಲ್ಲಿ ಉತ್ತಮ ಪ್ರದರ್ಶನ ನೀಡಿರುತ್ತಾರೆ ಹಾಗೂ ಈ ತಂಡದಲ್ಲಿ ಅತ್ಯುತ್ತಮ ಶೂಟರ್ ಆಗಿ ಪ್ರಶಸ್ತಿಯನ್ನು ಪಡೆದಿರುತ್ತಾರೆ. ಅಲ್ಲದೆ ಇನ್ನು ಅನೇಕ ತರಬೇತಿಯನ್ನು ಪಡೆದು ಮೇಲಾಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಇವರು ಅನೇಕ ಕೋಮುಗಲಭೆ ಸಂದರ್ಭದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುವಲ್ಲಿ ಹಾಗೂ ಲೋಕಸಭಾ ಮತ್ತು ವಿಧಾನಸಭಾ ಚುನಾವಣೆಯ ಸಂಧರ್ಭದಲ್ಲಿ ರಾಜ್ಯ ಮತ್ತು ಹೊರರಾಜ್ಯಗಳಲ್ಲಿ ಬಂದೋಬಸ್ತ್ ಕರ್ತವ್ಯವನ್ನು ನಿರ್ವಹಿಸಿರುತ್ತಾರೆ. 1995ರಲ್ಲಿ ಕುಖ್ಯಾತ ವೀರಪ್ಪನ್ ವಿರುದದ್ಧ ಕೋಬಿಂಗ್ ಕಾರ್ಯಚರಣೆಯಲ್ಲಿ ತಮ್ಮ ಜೀವದ ಹಂಗನ್ನು ತೊರೆದು ವೀರಪ್ಪನ್ ಸಹಚರರ ಹಾಗೂ ಇವರ ನಡುವೆ ಅನೇಕಬಾರಿ ಗುಂಡಿನ ಚಕಮಖಿಯಾಗಿರುತ್ತದೆ. ಇವರ ಈ ಕಾರ್ಯವನ್ನು ಮೇಲಾಧಿಕಾರಿಗಳು ಮೆಚ್ಚಿ ಇವರಿಗೆ ಮೆಚ್ಚುಗೆಯ ಪತ್ರ ಮತ್ತು ನಗದು ಬಹುಮಾನಗಳನ್ನು ನೀಡಿ ಗೌರವಿಸಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ರಮೇಶ್**

ಆರ್‌ಹೆಚ್‌ಸಿ,
5ನೇ ಪಡೆ, ಕೆಎಸ್‌ಆರ್‌ಪಿ, ಮೈಸೂರು

ಇವರು ಕರ್ನಾಟಕ ರಾಜ್ಯ ಮೀಸಲು ಪಡೆಯಲ್ಲಿ ಮೀಸಲು ಪೊಲೀಸ್ ಪೇದೆಯಾಗಿ 16.01.1997 ರಂದು ಸೇವೆಗೆ ಸೇರಿರುತ್ತಾರೆ. ಮೂಲ ತರಬೇತಿಯ ನಂತರ ಇವರು ವಿಶೇಷ ತನಿಖಾ ಪಡೆಯಲ್ಲಿ ಮಲೈಮಹದೇಶ್ವರ ಬೆಟ್ಟ, ತಮಿಳುನಾಡಿನ ಅರಣ್ಯ ಪ್ರದೇಶದಲ್ಲಿ 2000 ಸಾಲಿನಿಂದ 2004 ರವರೆಗೆ ಕುಖ್ಯಾತ ವೀರಪ್ಪನ್ ವಿರುದ್ಧ ಕೊಂಬಿಂಗ್ ಕಾರ್ಯಾಚರಣೆಯಲ್ಲಿ, ಭಾಗವಹಿಸಿ, ಮೇಲಾಧಿಕಾರಿಗಳ ಮೆಚ್ಚುಗೆ ಪಾತ್ರರಾಗಿರುತ್ತಾರೆ. ಇವರು ಛತ್ತಿಸ್‌ಗಡ, ಮಧ್ಯಪ್ರದೇಶ ಹಾಗೂ ರಾಜಸ್ಥಾನ ರಾಜ್ಯಗಳ ಚುನಾವಣೆಯ ಬಂದೋಬಸ್ತ್ ಕರ್ತವ್ಯವನ್ನು 2008ನೇ ಸಾಲಿನಲ್ಲಿ ಉತ್ತಮವಾಗಿ ಕರ್ತವ್ಯವನ್ನು ನಿರ್ವಹಿಸಿಸುವ ಮೂಲಕ ಪ್ರಶಂಸೆಗೆ ಬಾಜನರಾಗಿರುತ್ತಾರೆ. ಇವರು ರಾಜ್ಯದಲ್ಲಿ ಲೋಕಸಭಾ, ವಿಧಾನಸಭಾ ಚುನಾವಣಾ ಸಂದರ್ಭದಲ್ಲಿ ಹಾಗೂ ಕಾನೂನು ಸುವ್ಯವಸ್ಥೆಯನ್ನು ಕಾಪಾಡಲು ನಿಯೋಜಿಸಲಾದ ಕರ್ತವ್ಯದಲ್ಲಿ ಇವರ ಕಾರ್ಯವೈಖರಿಯನ್ನು ಗಮನಿಸಿ ಮೇಲಾಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗಿರುತ್ತರೆ. ಕಾಡಿನ ಸಂಪತ್ತಿನ ಕಳ್ಳಸಾಗಾಣಿಕೆಯನ್ನು ತಡೆಯುವ ಸಲುವಾಗಿ ಕೊಡಗು ಕೇರಳ ಗಡಿಭಾಗದ ಚೆಕ್ ಪೋಸ್ಟ್ ಕರ್ತವ್ಯಕ್ಕೆ ಇವರನ್ನು ನಿಯೋಜಿಸಲಾಗಿರುತ್ತದೆ. ಇವರು ಗಣಕಯಂತ್ರವನ್ನು ನಿರ್ವಹಿಸುವಲ್ಲಿ ಮತ್ತು ಪೊಲೀಸ್ ಐಟಿ ತಂತ್ರಾಂಶವನ್ನು ನಿರ್ವಹಿಸುವಲ್ಲಿ ಪರಿಣಿತಿಯನ್ನು ಹೊಂದಿರುತ್ತಾರೆ. ಪೊಲೀಸ್ ಇಲಾಖೆಯಲ್ಲಿ ಇವರ 22 ವರ್ಷಗಳ ಕಾರ್ಯವೈಖರಿ, ಕರ್ತವ್ಯ ನಿಷ್ಟೆಯು ಯುವ ಪೀಳಿಗೆಗೆ ಮಾದರಿಯಾಗಿದೆ ಹಾಗೂ ಇಲಾಖೆಯು ಇವರ ಕಾರ್ಯವೈಖರಿಯನ್ನು ಪ್ರಶಂಶಿಸಿ 15 ನಗದು ಬಹುಮಾನಗಳನ್ನು ಮತ್ತು 08 ಪುರಸ್ಕೃತ ಪತ್ರಗಳಿಗೆ ಭಾಜನರಾಗಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಪಿ.ವಿ. ವಿಜಯ್‌ಕುಮಾರ್**

ಆರ್‌ಹೆಚ್‌ಸಿ,
4ನೇ ಪಡೆ, ಕೆಎಸ್‌ಆರ್‌ಪಿ, ಬೆಂಗಳೂರು

ಇವರು 1996 ರಲ್ಲಿ ಪೊಲೀಸ್ ಕಾನ್ಸೆಟೇಬಲ್ ಆಗಿ ಕರ್ನಾಟಕ ರಾಜ್ಯ ಲಿಸರ್ವ್ ಪೊಲೀಸ್ ಆಗಿ ನೇಮಕಾತಿ ಹೊಂದಿ ನಂತರ 2016 ರಲ್ಲಿ ಹೆಡ್ ಕಾನ್ಸೆಟೇಬಲ್ ಆಗಿ ಬಡ್ತಿ ಪಡೆದು, ಕಾನೂನು ಮತ್ತು ಸುವ್ಯವಸ್ಥೆ ನಿರ್ವಹಣೆಗಾಗಿ ಪ್ಲಟೂನ್ ಜೊತೆಗೆ ರಾಜ್ಯದ ವಿವಿಧ ಸ್ಥಳಗಳಲ್ಲಿ ಕಾರ್ಯನಿರ್ವಹಿಸಿರುತ್ತಾರೆ. ಇವರು ರಾಜ್ಯ ಹಾಗೂ ಹೊರರಾಜ್ಯಗಳಲ್ಲಿ ಚುನಾವಣಾ ಬಂದೋಬಸ್ತ್ ಕರ್ತವ್ಯವನ್ನು ನಿರ್ವಹಿಸಿರೂತ್ತಾರೆ. ಈ ಇಲ್ಲಾ ಸಮಯಗಳಲ್ಲಿ ಅವರು ಅತ್ಯುತ್ತಮವಾದ ಕೆಲಸವನ್ನು ನಿರ್ವಹಿಸಿರುತ್ತಾರೆ. ಶ್ರೀ ಪಿ.ವಿ. ವಿಜಯಕುಮಾರ್ ಅವರಿಗೆ ಕಂಪ್ಯೂಟರ್ ಕೆಲಸದಲ್ಲಿ ಉತ್ತಮ ಜ್ಞಾನಹೊಂದಿರುತಾರೆ. ಆದ್ದರಿಂದ ಆರ್‌ಪಿಸಿಎಸ್., ಕೆಎಸ್‌ಆರ್‌ಪಿ ಮತ್ತು ಐಆರ್‌ಬಿ, ಆರ್‌ಎಸ್‌ಐ ದೈಹಿಕ ಪರೀಕ್ಷೆಯ ನೇಮಕಾತಿ ಪ್ರಕ್ರಿಯೆಯಲ್ಲಿ ಹಿರಿಯ ಅಧಿಕಾರಿಗಳಿಗೆ ಸಹಾಯ ಮಾಡಿದಾರೆ. KSISF, CAR & DAR ಗೆ. ಅವರ ಪ್ರಾಮಾಣಿಕ ಪ್ರಯತ್ನದಿಂದಾಗಿ ಮೇಲಿನ ಎಲ್ಲಾ ಆಯ್ಕೆಗಳನ್ನು ನ್ಯಾಯಯುತ ಮತ್ತು ಪಾರದರ್ಶಕ ರೀತಿಯಲ್ಲಿ ನೇಮಕಾತಿ ಪ್ರಕ್ರಿಯೆ ಪೂರ್ಣಗೊಂಡಿರುತ್ತದೆ. ಇವರ ಅತ್ಯುತ್ತಮ ಪ್ರಯತ್ನಗಳು ಮತ್ತು ನೇಮಕಾತಿ ಪ್ರಕ್ರಿಯೆಯನ್ನು ಸುಗಮವಾಗಿ ನಡೆಸುವಲ್ಲಿ ಇವರು ನೀಡಿದ ಕೊಡುಗೆಯನ್ನು ಹಿರಿಯ ಅಧಿಕಾರಿಗಳು ಶ್ಲಾಘಿಸಿರುತ್ತಾರೆ. ಕಂಪ್ಯೂಟರ್‌ನಲ್ಲಿ ಇವರ ಉತ್ತಮ ಜ್ಞಾನದ ದೃಷ್ಟಿಯಿಂದ ಅವರನ್ನು ಪೊಲೀಸ್ ಐಟಿಯಲ್ಲಿ ತರಬೇತಿ ಪಡೆಯಲು ನಿಯೋಜಿಸಲಾಗಿದೆ. ಆದ್ದರಿಂದ ಇವರಿಗೆ ಎಂ.ಟಿ. ಮಾಡ್ಯೂಲ್, ಜಿಪಿಎಸ್ ಸಿಸ್ಟಮ್ ಕಾರ್ಯಾವರಣೆ ವಹಿಸಲಾಗಿದೆ. ಇವರು ಈ ಕೆಲಸವನ್ನು ಅತ್ಯುತ್ತಮ ರೀತಿಯಲ್ಲಿ ಮಾಡಿ ಮೇಲಾಧಿಕಾರಿಗಳ ಮೆಚ್ಚುಗೆಗೆ ಪಾತ್ರರಾಗಿರುತ್ತಾರೆ. ಇವರಿಗೆ ಅನೇಕ ನಗದು ಬಹುಮಾನ ಹಾಗೂ ಪ್ರಶಂಸನ ಪತ್ರಗಳನ್ನು ನೀಡಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






## ಶ್ರೀ ರಂಗನಾಥ್

ಸಿಹೆಚ್‌ಸಿ,
ಅಲ್ದೂರು ಪೊಲೀಸ್ ಠಾಣೆ,
ಚಿಕ್ಕಮಗಳೂರು ಜಿಲ್ಲೆ

ಇವರು 1996ನೇ ಸಾಲಿನಲ್ಲಿ ಪೊಲೀಸ್ ಇಲಾಖೆಯಲ್ಲಿ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಆಗಿ ನೇಮಕಾತಿ ಹೊಂದಿದ್ದು, ಮೂಲ ತರಬೇತಿಯ ನಂತರ ಇವರನ್ನು ವಿವಿಧ ಪೊಲೀಸ್ ಠಾಣೆಗಳಿಗೆ ಮತ್ತು ಜಿಲ್ಲೆಯ ಉಪವಿಭಾಗೀಯ ಕಛೇರಿಗಳಿಗೆ ನೇಮಿಸಲಾಯಿತು. ಅಲ್ಲಿ ಅವರು ಬರಹಗಾರರಾಗಿ ಮತ್ತು ತನಿಖಾ ಅಧಿಕಾರಿ ಸಹಾಯಕರಾಗಿ ಕೆಲಸ ಮಾಡಿದ್ದಾರೆ. ಪ್ರಸ್ತುತ ಅವರು ಎಸ್‌ಡಿಪಿಓ ಚಿಕ್ಕಮಗಳೂರು ಉಪವಿಭಾಗ ಕಛೇರಿಯಲ್ಲಿ ಪೊಲೀಸ್ ಹೆಡ್‌ಕಾನ್ಸ್‌ಟೇಬಲ್ ಆಗಿ ಕೆಲಸ ಮಾಡುತ್ತಿದ್ದಾರೆ. ಅವರು ನಿರ್ವಹಿಸಿದ ಯಾವುದೇ ಪ್ರಕರಣವನ್ನು ಪತ್ತೆಹಚ್ಚಲಾಗದೆ ಅಥವಾ ಚಾರ್ಜ್‌ಶೀಟ್ ಮಾಡದೇ ಬಿಡಲಾಗಿಲ್ಲ. ಅವರ ನಿಖರವಾದ ವೃತ್ತಿಪರತೆಯೊಂದಿಗೆ ಮಹಜರ್‌ಗಳು ಮತ್ತು ಚಾರ್ಜ್‌ಶೀಟ್‌ಗಳನ್ನು ಸಿದ್ಧಪಡಿಸುವುದು ಮತ್ತು ನ್ಯಾಯಾಲಯದ ವಿಚಾರಣೆಯನ್ನು ಗಣನೆಗೆ ತೆಗೆದುಕೊಳ್ಳುವುದು ಪ್ರಕರಣಗಳ ಅಪರಾಧ ಸಾಬೀತಾಗಿದೆ. ಅವರು ಎಲ್ಲಾ ನಿಯಮಗಳು ಮತ್ತು ನಿಬಂಧನೆಗಳು ಮತ್ತು ಪ್ರಮಾಣಿತ ಕಾರ್ಯಾಚರಣಾ ಕಾರ್ಯವಿಧಾನಗಳಿಗೆ ಬದ್ಧರಾಗಿರುತ್ತಾರೆ. ದಿನಾಂಕ: 13/03/2001 ರಂದು ಮೂವರು ಆರೋಪಿಗಳು ಗೋಣಿಬೀಡು ಪೊಲೀಸ್ ಠಾಣೆ ಮಿತಿಯಲ್ಲಿರುವ ಬೆಟ್ಟದಮನೆ ಹ್ಯಾಂಡ್ ಪೋಲೀಸ್ ಬಳಿ ರಸ್ತೆಯೊಂದರಲ್ಲಿ ಮರವನ್ನು ಕಡಿದು ಅಬಕಾರಿ ಜೀಪನ್ನು ನಿಲ್ಲಿಸಿ ಬಲವಂತವಾಗಿ ರೂ.13,710/- ನಗದು ಮೆಣಸಿನ ಪುಡಿ ಹೋಡಿದ್ದು ಈ ಪ್ರಕರಣದಲ್ಲಿ ಆರೋಪಿಗಳನ್ನು ಪತ್ತೆ ಹಚ್ಚಲು ವಿಶೇಷ ತಂಡವನ್ನು ರಚಿಸಲಾಯಿತು. ಇವರು ಕೂಡ ವಿಶೇಷ ತಂಡದ ಭಾಗವಾಗಿದ್ದರು. ಅವರು ಎಲ್ಲಾ ಸಿಬ್ಬಂದಿಯೊಂದಿಗೆ ಪಟ್ಟುಬಿಡದೇ ಕೆಲಸ ಮಾಡಿ ಮೂವರು ಆರೋಪಿಗಳನ್ನು ಬಂಧಿಸಿದರು. 2003ನೇ ಸಾಲಿನಲ್ಲಿ ಗೋಣಿಬೀಡು ಪೊಲೀಸ್ ಠಾಣೆ ಮಿತಿಯ ಅರಣ್ಯ ಪ್ರದೇಶದಲ್ಲಿ ಗಾಂಜಾವನ್ನು ಬೆಳೆಸಲಾದ ಮಾಹಿತಿಯನ್ನು ಅವರು ಸಂಗ್ರಹಿಸಿದರು. ಮತ್ತು ಅವರ ಮಾಹಿತಿಯ ಆಧಾರದ ಮೇಲೆ, ಡಿವೈಎಸ್‌ಪಿ ನೇತೃತ್ವದ ಸ್ಥಳೀಯ ಪೊಲೀಸರು ಯಶಸ್ವಿ ದಾಳಿ ನಡೆಸಿ ರೂ.50 ಲಕ್ಷಗಳ ಗಾಂಜಾವನ್ನು ವಶಪಡೆದಿರುತ್ತಾರೆ. ಇವರು ಹಲವಾರು ಸಂವೇದನಾಶೀಲ ಪ್ರಕರಣಗಳ ತನಿಖೆಯಲ್ಲಿ ತನಿಖಾ ಅಧಿಕಾರಿಗಳಿಗೆ ಸಹಾಯ ಮಾಡಿದ್ದಾರೆ. ಮಹಿಳೆಯರ ಮೇಲಿನ ಅಪರಾಧಕ್ಕೆ ಸಂಬಂಧಿದ ಪ್ರಕರಣಗಳನ್ನು ಇವರು ಯಶಸ್ವಿಯಾಗಿ ಮುಕ್ತಾಯಗೊಳ್ಳಲು ತಮ್ಮ ಪಾತ್ರವನ್ನು ವಹಿಸಿರುತ್ತಾರೆ.

ಇವರು ಸಲ್ಲಿಸಿದ ಸೇವೆಯನ್ನು ಮೆಚ್ಚಿ, ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲನ ಸ್ವಾತಂತ್ರೋತ್ಸವ ದಿನಾಚರಣೆ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಬಿ ರಾಮಚಂದ್ರ ಜಾದವ್**

ಸಿಹೆಚ್‌ಸಿ–216,
ಡಿಪಿಓ, ದಾವಣಗೆರೆ ಜಿಲ್ಲೆ

ಇವರು 1994 ರಂದು ಪೊಲೀಸ್ ಇಲಾಖೆಗೆ ಸಿವಿಲ್ ಪೊಲೀಸ್ ಕಾನ್ಸಟೇಬಲ್ ಆಗಿ ಸೇರಿಕೊಂಡರು ಮತ್ತು ಕಳೆದ 20 ವರ್ಷಗಳಿಂದ ಜಿಲ್ಲೆಯಾದ್ಯಂತ ಸೇವೆ ಸಲ್ಲಿಸಿದರು, ಮತ್ತು ದಾವಣಗೆರೆ ಜಿಲ್ಲಾ ಪೊಲೀಸ್ ಕಂಪ್ಯೂಟರ್ ವಿಭಾಗವನ್ನು ನೋಡಿಕೊಳ್ಳುತ್ತಿದ್ದಾರೆ. 90 ರ ದಶಕದ ಆರಂಭದಲ್ಲಿ ಕರ್ನಾಟಕ ರಾಜ್ಯ ಪೊಲೀಸ್‌ರು ಆಧುನೀಕರಣ ಯೋಜನೆಯನ್ನು ಕೈಗೊಂಡರು, ಇದರಲ್ಲಿ ಠಾಣೆಯ ದಾಖಲೆಗಳ ಗಣಕೀಕರಣವನ್ನು ಕೇಂದ್ರೀಕರಿಸಲಾಯಿತು. 1997 ರಲ್ಲಿ ಈ ಚಾಲನೆಯ ಭಾಗವಾಗಿ, ಕಂಪ್ಯೂಟರ್ ಮತ್ತು ಕೌಶಲ್ಯಗಳನ್ನು ನಿರ್ವಹಿಸುವಲ್ಲಿ ಆಳವಾದ ಜ್ಞಾನವನ್ನು ಹೊಂದಿದ್ದ ಇವರು ದಾವಣಗೆರೆ ಜಿಲ್ಲೆಯಲ್ಲಿ ಗಣಕೀಕರಣದ ಆಧುನೀಕರಣಕ್ಕಾಗಿ ಕಳೆದ 24 ವರ್ಷಗಳಿಂದ ಪಟ್ಟುಬಿಡದೆ ಕೆಲಸ ಮಾಡಿದರು. ಠಾಣೆಯ ಗಣಕೀಕರಣವು ಯಶಸ್ವಿಯಾಗಿದೆ. ಪೊಲೀಸ್ ಠಾಣೆ ವಲಯಗಳು ಮತ್ತು ಉಪವಿಭಾಗದ ಪೊಲೀಸ್ ಅಧಿಕಾರಿಗಳಲ್ಲಿ ಕಂಪ್ಯೂಟರ್ ಅಳವಡಿಸುವಲ್ಲಿ ಇವರ ಪಾತ್ರ ಅತ್ಯಂತ ಪ್ರಶಂಸನೀಯ. ಅವರ ಸಾಮರ್ಥ್ಯಗಳಿಗೆ ಸಾಕ್ಷಿಯಾಗಿ, ಅವರನ್ನು ಶಿವಮೊಗ್ಗ ಮತ್ತು ಬೆಳಗಾವಿ ಜಿಲ್ಲೆಯಲ್ಲಿ ಮೈಕ್ರೋಸಾಫ್ಟ್ ಎಕ್ಸ್ಚೇಂಜ್ ಸರ್ವರ್ ಸ್ಥಾಪನೆಗೆ ನಿಯೋಜಿಸಲಾಯಿತು, ಇದನ್ನು ಸಂಬಂಧಪಟ್ಟ ಜಿಲ್ಲೆಗಳು ಮತ್ತು ರಾಜ್ಯ ಪೊಲೀಸ್ ಕಂಪ್ಯೂಟರ್ ವಿಂಗ್‌ನ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮೆಚ್ಚಿದರು. ಅಪರಾಧಿಗಳನ್ನು ಪತ್ತೆಹಚ್ಚುವಲ್ಲಿ ಮತ್ತು ನೆರವು ನೀಡುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿರುತ್ತಾರೆ. ಸಿಡಿಆರ್ ವಿಶ್ಲೇಷಣೆಯಲ್ಲಿ ಅವರ ಜ್ಞಾನವು ಶ್ಲಾಘನೀಯ. ಅವರ ಪ್ರಯತ್ನ ಮತ್ತು ಸಮರ್ಪಣೆಯಿಂದಾಗಿ ದವಾಣಗೆರೆ ಜಿಲ್ಲೆಯಲ್ಲಿ ಹೆಚ್ಚಿನ ಸಂಖ್ಯೆಯ ಘೋರ ಪ್ರಕರಣಗಳು ತನಿಖೆಯ ಅವಧಿಯಲ್ಲಿ ಪತ್ತೆಯಾಗಿವೆ. ಅವರ ಪ್ರಯತ್ನಗಳಿಂದಾಗಿ ಈ ಕೆಳಗಿನ ಪ್ರಕರಣಗಳು ಪತ್ತೆಯಾದವು, ಇದು ರಾಷ್ಟ್ರೀಯ ಭದ್ರತೆಗೆ ಸಕಾರಾತ್ಮಕವಾಗಿ ಕೊಡುಗೆ ನೀಡಿತು ಮತ್ತು ಚಿನ್ನ ಮತ್ತು ಬೆಳ್ಳಿ ಚೇತರಿಸಿಕೊಂಡ ದೊಡ್ಡ ಪ್ರಕರಣಗಳನ್ನು ಸರಿಯಾದ ಮಾಲೀಕರಿಗೆ ಹಿಂದಿರುಗಿಸಿದ ಕಾರಣ ಸಾರ್ವಜನಿಕರಿಂದ ಸಾಕಷ್ಟು ಅಭಿಮಾನ ವ್ಯಕ್ತವಾಗಿರುತ್ತದೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






## ಶ್ರೀಮತಿ ಎಂ.ಬಿ. ಸುಮತಿ

ಮಹೆಚ್‌ಸಿ,
ಮಹಿಳಾ ಪೊಲೀಸ್ ಠಾಣೆ, ಮಡಿಕೇರಿ

ಇವರು 1996 ರಲ್ಲಿ ಪೊಲೀಸ್ ಪೇದೆಯಾಗಿ ಸೇವೆಗೆ ಸೇರಿರುತ್ತಾರೆ. ತರಬೇತಿಯ ನಂತರ ಅಬಕಾರಿ ಮತ್ತು ಲಾಟರಿ ನಿಷೇಧ ದಳ ಒಳಗೊಂಡಂತೆ 05 ಪೊಲೀಸ್ ಠಾಣೆಗಳಲ್ಲಿ ಕರ್ತವ್ಯ ನಿರ್ವಹಿಸಿರುತ್ತಾರೆ. ಇವರು ಘೋರ / ಘೋರವಲ್ಲದ ತನಿಖೆಗಳನ್ನು ಹಾಗೂ ಅಬಕಾರಿ ಮತ್ತು ಲಾಟರಿ ಪ್ರಕರಣಗಳನ್ನು ಪತ್ತೆ ಮಾಡುವಲ್ಲಿ ತನಿಖಾಧಿಕಾರಿ ರವರಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ ಹಾಗೂ ಮಡಿಕೇರಿ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ 04 ಎಲ್‌ಪಿಸಿ ಪ್ರಕರಣಗಳನ್ನು ಪತ್ತೆ ಮಾಡಿರುತ್ತಾರೆ. ಇವರು ಬಾಲಾಪರಾಧಿಗಳ ಬಗ್ಗೆ ಮಾಹಿತಿ ಸಂಗ್ರಹಿಸಿ ರಕ್ಷಣಾ ಕೇಂದ್ರ ಅಥವಾ ಪೋಷಕರಿಗೆ ಒಪ್ಪಿಸುವಲ್ಲಿ ಹಾಗೂ ಅಪಹರಣ ಮತ್ತು ಪೋಸ್ಕೋ ಪ್ರಕರಣಗಳನ್ನು ಪತ್ತೆ ಮಾಡುವಲ್ಲಿ ಚಾತುರ್ಯತೆ ಹೊಂದಿರುತ್ತಾರೆ. ತಮ್ಮ 22 ವರ್ಷಗಳ ಸೇವೆಯಲ್ಲಿ ಹಿರಿಯ ಅಧಿಕಾರಿಗಳಿಂದ ಹಲವು ಬಾರಿ ಮೆಚ್ಚುಗೆ ಪ್ರಮಾಣಪತ್ರ, ಪ್ರಶಂಸೆ ಹಾಗೂ ಬಹುಮಾನಗಳನ್ನು ಪಡೆದಿರುತ್ತಾರೆ. ಪ್ರಸ್ತುತ ಇವರು ಮಹಿಳಾ ಹೆಡ್‌ಕಾನ್ಸ್‌ಟೇಬಲ್ ಹುದ್ದೆಗೆ ಪದೋನ್ನತಿ ಪಡೆದು ವಿಶೇಷ ಬಾಲಾಪರಾಧ ಪೊಲೀಸ್ ಘಟಕ ಕೊಡಗು ಜಿಲ್ಲೆ, ಮಡಿಕೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.






**ಶ್ರೀ ಕೊಪ್ಪಳ ಚಂದ್ರ**

ಸಿಹೆಚ್‌ಸಿ–336, ಸಿಸಿಬಿ,
ಮಂಗಳೂರು ನಗರ

ಇವರು 1ಪೊಲೀಸ್ ಕಾನ್ಸ್‌ಟೇಬಲ್ ಆಗಿ 1996 ರಲ್ಲಿ ಸೇವೆಗೆ ಸೇರಿರುತ್ತಾರೆ. ಮಂಗಳೂರು ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ತನಿಖಾಧಿಕಾರಿಗಳಿಗೆ ಸಹಾಯಕರಾಗಿ ಕರ್ತವ್ಯ ನಿರ್ವಹಿಸಿರುತ್ತಾರೆ. ಕುಖ್ಯಾತ ಅಪರಾಧಿ ರಶೀದ್ ಮಲಬಾರಿ ಮತ್ತು ಇತನ ಸಹಚರರನ್ನು ಬಂಧಿಸಲು ಹಾಗೂ ಆತನ ಬಳಿ ಇದ್ದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಂಡ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುತ್ತಾರೆ. ಮತ್ತೊಬ್ಬ ಅಪರಾಧಿ ರವಿ ಪೂಜಾರಿಯ 7 ಸಹಚರರವನ್ನು ಸೆರೆಹಿಡಿದ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುತ್ತಾರೆ. ಅಲ್ಲದೇ ಅನೇಕ ಕೊಲೆ ಪ್ರಕರಣಗಳಲ್ಲಿ ಅಪರಾಧಿಗಳನ್ನು ಪತ್ತೆ ಮಾಡಿ, ಸೆರೆಹಿಡಿದಿರುವ ಕಾರ್ಯಾಚರಣೆಯಲ್ಲಿ ಭಾಗಿಯಾಗಿರುತ್ತಾರೆ. ಉಳ್ಳಾಲದಲ್ಲಿ ಪಿಎಫ್‌ಐ ಸಂಘಟನೆಯವರು ದುಷ್ಕೃತ್ಯವೆಸಗಲು ಇಟ್ಟುಕೊಂಡಿದ್ದ ಪೆಟ್ರೋಲ್ ಬಾಂಬ್‌ಗಳನ್ನು ವಶಪಡಿಸಿಕೊಂಡ ಕಾರ್ಯಾಚಾರಣೆಯಲ್ಲಿಯೂ ಭಾಗಿಯಾಗಿರುತ್ತಾರೆ. 2016 ರಲ್ಲಿ ನಡೆದ ಪಿಯುಸಿ ಕೆಮಿಸ್ಟ್ರಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಬಯಲಾಗಿದ್ದ ಪ್ರಕರಣದಲ್ಲಿನ ಆರೋಪಿಗಳನ್ನು ಪತ್ತೆ ಮಾಡಿದ ತಂಡದಲ್ಲಿ ಇವರು ಸಹ ಉತ್ತಮ ಕಾರ್ಯನಿರ್ವಹಿಸಿರುತ್ತಾರೆ. ಕೋಣಾಜೆ ಪೊಲೀಸ್ ಠಾಣೆಯ ವ್ಯಾಪ್ತಿಯಲ್ಲಿ 52 ಕೆ.ಜಿ. ಗಾಂಜ ವಶಪಡಿಸಿಕೊಳ್ಳಲು ತನಿಖಾಧಿಕಾರಿಗೆ ಸಹಾಯ ಮಾಡಿರುತ್ತಾರೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.





**ಶ್ರೀ ದೊಡ್ಡಪ್ಪ ಎಂ. ಮ್ಯಾಗೇರಿ**

ಸಿಹೆಚ್‌ಸಿ–730, ಡಿಪಿಓ,
ಗದಗ ಜಿಲ್ಲೆ.

ಇವರು 1993 ರಲ್ಲಿ ಸಿ.ಪಿ.ಸಿ.ಯಾಗಿ ನೇಮಕಹೊಂದಿ ಬೆಟಗೇರಿ ಬಡಾವಣೆ ಪೊಲೀಸ್ ಠಾಣೆಯಲ್ಲಿ ಸೇವೆ ಸಲ್ಲಿಸಿರುತ್ತಾರೆ. 2001 ರಲ್ಲಿ ಎನ್.ಸಿ.ಆರ್.ಬಿ ನವದೆಹಲಿಯ ಸಿ.ಎಫ್.ಪಿ.ಬಿ. ಆಲ್ ಇಂಡಿಯಾ ಬೋರ್ಡ್ ರವರು ನಡೆಸುವ ಫಿಂಗರ್ ಪ್ರಿಂಟ್ ಎಕ್ಸ್‌ಪರ್ಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುತ್ತಾರೆ. ಇವರು 25-06-2011 ರಂದು ಸಿ.ಹೆಚ್.ಸಿ ಯಾಗಿ ಬಡ್ತಿ ಪಡೆದರು, 130 ಕ್ಕೂ ಹೆಚ್ಚು ಮನೆ ಕಳ್ಳತನ ಮತ್ತು 05 ಕೊಲೆಗಳನ್ನು ಪತ್ತೆಹಚ್ಚುವಲ್ಲಿ ಇವರು ಪ್ರಮುಖ ಪಾತ್ರ ವಹಿಸಿದ್ದಾರೆ, ಇವರು 125 ರಾಜ್ಯ ಮತ್ತು ಅಂತರರಾಜ್ಯ ಅಪರಾಧಿಗಳನ್ನು ಅಪರಾಧದ ಸ್ಥಳದಲ್ಲಿ ಕಂಡುಬರುವ ಬೆರಳಚ್ಚುಗಳ ಮೂಲಕ ಅಪರಾಧಿಗಳನ್ನು ಕಂಡುಹಿಡಿದು ಅಪರಾಧಿಗಳಿಂದ ರೂ.1.50 ಕೋಟಿ ಹಣವನ್ನು ವಶಪಡಿಸಿಕೊಳ್ಳುವಲ್ಲಿ ಪ್ರಮುಖ ಪಾತ್ರವಹಿಸಿರುತ್ತಾರೆ. 13 ಕ್ಲಿಷ್ಟಕರ ಪ್ರಕರಣಗಳಲ್ಲಿ ಇವರು ವಿವಾದಿತ ಬೆರಳು ಮುದ್ರಣಗಳ ಬಗ್ಗೆ ಅಭಿಪ್ರಾಯ ಮತ್ತು ಮಾಹಿತಿಯನ್ನು ನೀಡುವಲ್ಲಿ ಇವರು ವೈಯಕ್ತಿಕವಾಗಿ ಜವಾಬ್ದಾರಿಯಿಂದ ಇವರು 200 ಕ್ಕೂ ಹೆಚ್ಚು ಅಪರಾಧಿಗಳನ್ನು ಪತ್ತೆಹಚ್ಚುವಲ್ಲಿ ಮತ್ತು ಅವರ ಹಿಂದಿನ ಅಪರಾಧ ಚಟುವಟಿಕೆಗಳನ್ನು ಬೆರಳು ಮುದ್ರೆಗಳ ಮೂಲಕ ವೈಜ್ಞಾನಿಕವಾಗಿ ಸಾಬೀತುಪಡಿಸಿದ್ದಾರೆ. ಆದುದರಿಂದ, 2007 ರಲ್ಲಿ ಇವರಿಗೆ ಮಾನ್ಯ ಮುಖ್ಯ ಮಂತ್ರಿಯವರ ಪದಕವನ್ನು ನೀಡಿ ಗೌರವಿಸಲಾಗಿದೆ.

ಇವರ ಇಲ್ಲಿಯವರೆಗೆ ಪೊಲೀಸ್ ಇಲಾಖೆಯಲ್ಲಿ ಅತ್ಯಂತ ದಕ್ಷತೆ, ವೃತ್ತಿ ನಿಷ್ಠೆ, ಪ್ರಾಮಾಣಿಕತೆಯಿಂದ ಸಲ್ಲಿಸಿದ ಸೇವೆಯನ್ನು ಮೆಚ್ಚಿ ಮಾನ್ಯ ರಾಷ್ಟ್ರಪತಿಗಳು 2019ನೇ ಸಾಲಿನ ಸ್ವಾತಂತ್ರ್ಯೋತ್ಸವ ದಿನಾಚರಣೆಯ ಸಂದರ್ಭದಲ್ಲಿ ಶ್ಲಾಘನೀಯ ಸೇವಾ ಪದಕವನ್ನು ನೀಡಿ ಗೌರವಿಸಿರುತ್ತಾರೆ.




# ಪೊಲೀಸ್ ಶೌರ್ಯ ಪದಕ



# ವಿಶಿಷ್ಟ ಸೇವಾ ಪದಕ




# ಶ್ಲಾಘನೀಯ ಸೇವಾ ಪದಕ